ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SP NEWS ಡಿಜಿಟಲ್ ನ್ಯೂಸ್ ಕಹಾನಿ

SURYA PRAGATHI Kannada daily

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume:05 Issue:154 Date:05-07-2026 Sunday RNI NO : KARKAN/2021/80805 L2/RNP-1285/TMR/2025-27 Page:4 Price: 1.00

ಸಂಪುಟ: 05 ಸಂಚಿಕೆ: 154 ಪುಟ : 4 ಬೆಲೆ: 1.00 ರೂ

SIR ಕರ್ತವ್ಯಕ್ಕೆ ತೆರಳುತ್ತಿದ್ದಾಗ ಅಧಿಕಾರಿಗೆ ಅಪಘಾತ;

ಚಿಕಿತ್ಸೆ ಫಲಿಸದೆ ಭುವನಾ ಸಾವು

ಡಿಸಿ ಕಚೇರಿ ಎದುರು ವಿಎಒಗಳು ಧರಣಿ

ತುಮಕೂರು: SIR ಕರ್ತವ್ಯಕ್ಕೆ ತೆರಳುತ್ತಿದ್ದಾಗ ಅಪಘಾತ; ಇಬ್ಬರು ಮಹಿಳಾ ಸಿಬ್ಬಂದಿ ಪೈಕಿ ಓರ್ವರ ಸ್ಥಿತಿ ಗಂಭೀರ

ರಾಜ್ಯದಲ್ಲಿ ಕಳೆದ 5 ದಿನಗಳಿಂದ ಖಖಖ ಪ್ರಕ್ರಿಯೆ ನಡೆಯುತ್ತಿದೆ. ಸಾಲು ಸಾಲು ಲೋಪ ಆರೋಪಗಳ ಮಧ್ಯೆ ಇದೀಗ ಮತ್ತೊಂದು ಅವಘಡ ಸಂಭವಿಸಿದೆ. ಮತದಾರರ ಪಟ್ಟಿ ಪರಿಷ್ಕರಣೆ ಕರ್ತವ್ಯಕ್ಕೆ ತೆರಳುತ್ತಿದ್ದ ಇಬ್ಬರು ವಿಎಒ ಸಿಬ್ಬಂದಿ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿರುವಂತಹ ಘಟನೆ ತುಮಕೂರು ಜಿಲ್ಲೆಯಲ್ಲಿ ನಡೆದಿದೆ.

ರಾಜ್ಯಾದ್ಯಂತ ಎಸ್ಐಆರ್ ಪ್ರಕ್ರಿಯೆ ಚುರುಕು ಪಡೆದುಕೊಂಡಿದೆ. ಕೆಲವೆಡೆ ಎಸ್ ಐಆರ್ ನಡೆಸುವ ಬಿಎಲ್ ಒಗಳು ನಿಯಮಗಳನ್ನ ಗಾಳಿಗೆ ತೂರಿರುವುದು, ರಾಜಕೀಯ ಜಟಾಪಟಿಗೆ ಕಾರಣವಾಗಿದೆ. ಈ ಮಧ್ಯೆ ಖಖಖ ಕಾರ್ಯಕ್ಕಾಗಿ ತೆರಳುತ್ತಿದ್ದ ಇಬ್ಬರು ಸಿಬ್ಬಂದಿ ಅಪಘಾತದಲ್ಲಿ ಗಂಭೀರ ಗಾಯಗೊಂಡಿರುವಂತಹ ಘಟನೆ ತುಮಕೂರಿನಲ್ಲಿ ನಡೆದಿದೆ. ಡಿಸಿ ಒತ್ತಡ ಹಾಕಿದ್ದಕ್ಕೆ, ಬೇಗನೆ ತೆರಳುತ್ತಿದ್ದಾಗ ಹೀಗಾಗಿದೆ ಎಂಬ ಆರೋಪಗಳು ಕೇಳಿಬಂದಿವೆ.

SIR ಕರ್ತವ್ಯಕ್ಕೆ ತೆರಳುತ್ತಿದ್ದ ವಿಎಒ ಭುವನಾ ಅವರಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ತುಮಕೂರು ತಾಲೂಕಿನ ಗೂಳೂರು ಗ್ರಾಮದ ಬಳಿ ಅಪಘಾತ ಸಂಭವಿಸಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಸದ್ಯ ಸಿದ್ದಗಂಗಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಲ್ಮೆಟ್ ಧರಿಸಿದ್ದರೂ





ತಲೆಗೆ ಗಂಭೀರ ಗಾಯವಾಗಿದ್ದು, ಭುವನಾ ಪ್ರಜ್ಞಾಶೂನ್ಯರಾಗಿದ್ದಾರೆ.

ಭುವನಾ ಅಪಘಾತದ ಬಗ್ಗೆ ಮಾಹಿತಿ ನೀಡಿದ ಡಿಸಿ ಶುಭಕಲ್ಯಾಣ್



ಗಾಯಾಳು ಭುವನಾ ಆರೋಗ್ಯ ವಿಚಾರಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಡಿಸಿ ಶುಭ ಕಲ್ಯಾಣ್, 2016ರಿಂದ ಭುವನಾ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂದು ಬೆಳಗ್ಗೆ 8 ಗಂಟೆ ಸುಮಾರಿಗೆ SIR ಕರ್ತವ್ಯಕ್ಕೆ ತೆರಳುತ್ತಿದ್ದಾಗ ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿದ್ದು, ಭುವನಾಗೆ ಅಪಘಾತದಲ್ಲಿ ಗಾಯವಾಗಿದೆ. ಘಟನೆಯಿಂದ ವೈಯಕ್ತಿಕ ಹಾಗೂ ಇಲಾಖೆ ಸಿಬ್ಬಂದಿಗೆ ನೋವಾಗಿದೆ ಎಂದರು.

ಟಿ.ಬೇಗೂರಿನಿಂದ ಬಸ್ ನಲ್ಲಿ ಬಂದಿದ್ದ ಭುವನಾ, ಬಸ್ ನಿಲ್ದಾಣದಿಂದ ದ್ವಿಚಕ್ರ ವಾಹನದಲ್ಲಿ ತೆರಳುವಾಗ ಅಪಘಾತವಾಗಿದೆ. ಭುವನಾ ಹೆಲ್ಮೆಟ್ ಧರಿಸಿದ್ದರೂ ತಲೆಗೆ ಗಂಭೀರ ಗಾಯವಾಗಿದ್ದು, ಪ್ರಜ್ಞಾ ಶೂನ್ಯರಾಗಿದ್ದಾರೆ, ಆದರೆ ಹಾರ್ಟ್ ಬೀಟ್ ಇದೆ. ಭುವನಾ ಬೇಗ ಗುಣಮುಖರಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅಪಘಾತದ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಘಟನೆಗೆ ಯಾರನ್ನು ಹೊಣೆ ಮಾಡಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ಹುಟ್ಟು ಸಾವು ನಮ್ಮ ಕೈಯಲ್ಲಿಲ್ಲ, ಭುವನಾ ಅಪಘಾತ ಆಕಸ್ಮಿಕ ಘಟನೆ. ನಮಗೂ ಕುಟುಂಬವಿದೆ, ಭುವನಾ ಕುಟುಂಬ ಸದಸ್ಯರ ನೋವು ನಮಗೂ ತಿಳಿಯುತ್ತದೆ ಎಂದು ಡಿಸಿ ಶುಭಕಲ್ಯಾಣ್ ಹೇಳಿದ್ದಾರೆ.

ಮತ್ತೊಬ್ಬ ಸಿಬ್ಬಂದಿಗೂ ಅಪಘಾತ

ಇನ್ನು ಇದೇ ರೀತಿಯಾಗಿ SIR ಕರ್ತವ್ಯಕ್ಕೆ ತೆರಳುತ್ತಿದ್ದ ಮತ್ತೊಬ್ಬ ಸಿಬ್ಬಂದಿಗೂ ಅಪಘಾತವಾಗಿದ್ದು, ಗಾಯಗೊಂಡಿದ್ದಾರೆ. ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಹುಣಸೆಘಟ್ಟ ವೃತ್ತದ ಬಳಿ ಬೆಳಗ್ಗೆ 7.30ಕ್ಕೆ ದ್ವಿಚಕ್ರ ವಾಹನದಿಂದ ಬಿದ್ದು ವಿಎಒ ಸಹನಾ ಗಾಯಗೊಂಡಿದ್ದಾರೆ. ವಿಡಿಯೋ ಕಾಲ್ ಮೂಲಕ SIR ಕರ್ತವ್ಯಕ್ಕೆ ತೆರಳುತ್ತಿದ್ದಾಗ ಅಪಘಾತ; ಪ್ರಕ್ರಿಯೆ ತೋರಿಸುವಂತೆ ತಹಶೀಲ್ದಾರ್ ಲೋಕೇಶ್ ಸೂಚನೆಯಂತೆ ಸ್ಥಳ ತೋರಿಸಲು



ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ಸದ್ಯ ಗಾಯಾಳು ಸಹನಾ ತಿಪಟೂರಿನ ವೈಭವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಡಿಸಿ ಕಚೇರಿ ಎದುರು ವಿಎಒಗಳು ಧರಣಿ

ಇನ್ನು ಈ ಘಟನೆ ಬಗ್ಗೆ ಆಕ್ರೋಶ ವ್ಯಕ್ತವಾಗಿದ್ದು, ತುಮಕೂರು ಡಿಸಿ ಕಚೇರಿ ಎದುರು ವಿಎಒಗಳು ಧರಣಿ ಮಾಡುತ್ತಿದ್ದಾರೆ. ಈ ವೇಳೆ ಮಾತನಾಡಿದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಿಮ್ಮಗಳ ವೈಯಕ್ತಿಕ ಪ್ರತಿಷ್ಠೆಗಾಗಿ ನೌಕರರನ್ನು ಬಲಿಪಶು ಮಾಡುತ್ತೀರಾ? ಜಿಲ್ಲಾಧಿಕಾರಿಗಳಿಗೆ ಕಾರು, ಬಂಗಲೆ ಎಲ್ಲೂ ಇದೆ, ಆದರೆ ನಮ್ಮ ಬಡ ನೌಕರರಿಗೆ ಏನ್ ಸವಲತ್ತು ಇದೆ ಎಂದು ನೇರವಾಗಿ ಪ್ರಶ್ನೆ ಮಾಡಿದ್ದಾರೆ. ಮುಖ್ಯ ಕಾರ್ಯದರ್ಶಿ ಜೊತೆ ಮಾತನಾಡಿ ರಾಜ್ಯಮಟ್ಟದಲ್ಲಿ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಬಾರಿ ಜಲ ವಿದ್ಯುತ್ ಉತ್ಪಾದನೆ ಕುಸಿತ ಸಾಧ್ಯತೆ;

ಮುಂಜಾಗ್ರತಾ ಕ್ರಮ ಕೈಗೊಳ್ಳಿ: ಸಿಎಂ ಡಿ.ಕೆ ಶಿವಕುಮಾರ್ ಸೂಚನೆ

ಬೆಂಗಳೂರು : ಎಲ್ ನಿನೊ ಪರಿಣಾಮದಿಂದಾಗಿ ಜಲ ವಿದ್ಯುತ್ ಉತ್ಪಾದನೆ ಕುಸಿಯುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ವಿಶೇಷ ತುರ್ತು ಕಾರ್ಯಯೋಜನೆ ರೂಪಿಸುವ ಜೊತೆಗೆ ಸಂಗ್ರಹಣೆ ಮತ್ತು ಇತರೆ ಮೂಲಗಳ ಉತ್ಪಾದನೆಗೆ ತುರ್ತು ಗಮನ ಹರಿಸಿ ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಸೂಚನೆ ನೀಡಿದರು.

ಮೊದಲ ಬಾರಿ ಇಂಧನ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು ಬರಗಾಲದ ಪರಿಸ್ಥಿತಿ ಎದುರಿಸಲು ಇಲಾಖೆ ಏನೇನು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ ಎನ್ನುವ ಬಗ್ಗೆ ವಿವರಗಳನ್ನು ಪಡೆದು ಸಾರ್ವಜನಿಕ ಬಳಕೆಗೆ ತೊಂದರೆ ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಇಂಧನ ಭದ್ರತೆಗಾಗಿ ಸರ್ಕಾರಕ್ಕೆ ಮೀಸಲಾದ ಕಲ್ಲಿದ್ದಲು ಗಣಿಗಳನ್ನು ಕಾರ್ಯಾರಂಭಗೊಳಿಸಿ, ಸಾಕಷ್ಟು ಕಲ್ಲಿದ್ದಲು ಸಂಗ್ರಹವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕು ಎಂದು ಸೂಚನೆ ನೀಡಿದರು.

ಹಿಂದಿನ ವರ್ಷಕ್ಕೆ ಹೋಲಿಸಿದರೆ ಸದ್ಯ ನಮ್ಮಲ್ಲಿ ವಿದ್ಯುತ್ ಸಂಗ್ರಹಣಾ ಸ್ಥಿತಿ ಸುಸ್ಥಿತಿಯಲ್ಲಿದೆ. ಹಿಂದಿನ ಮೂರು ವರ್ಷ ವಿದ್ಯುತ್ ಕಡಿತ ಇಲ್ಲದೆ ನಿರ್ವಹಿಸಿದ್ದೇವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಸದ್ಯದ ಸ್ಥಿತಿಯಲ್ಲಿ ನವೀಕರಿಸಬಹುದಾದ ಇಂಧನದ ಸಮರ್ಥ ನಿರ್ವಹಣೆಗಾಗಿ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್‌ಗಳು (ಃಇಖಖ), ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು (ಕಖಕ) ತ್ವರಿತವಾಗಿ ಜಾರಿಗೊಳಿಸಬೇಕು ಎಂದರು.

ನಾವು ಐಟಿ ಕ್ಯಾಪಿಟಲ್ ಆಗಿದ್ದೇವೆ. ಕೃತಕ ಬುದ್ಧಿಮತ್ತೆಯಲ್ಲೂ ನಮ್ಮ ರಾಜ್ಯ ಕ್ಯಾಪಿಟಲ್ ಆಗಬೇಕು



ಎನ್ನುವ ದಿಕ್ಕಿನಲ್ಲಿ ನಾವು ಮುಂದುವರೆಯುತ್ತಿದ್ದೇವೆ. ಹೀಗಾಗಿ ಡೇಟಾ ಸೆಂಟರ್‌ಗಳು, ಕೃತಕ ಬುದ್ಧಿಮತ್ತೆ (ಂಖ) ಮೂಲಸೌಕರ್ಯ ಹಾಗೂ ಡಿಜಿಟಲ್ ಆರ್ಥಿಕತೆಯಿಂದ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಗೃಹಜ್ಯೋತಿ ಯೋಜನೆಯಿಂದಾಗಿ ಯಾವುದೇ ಹೊರೆ ಆಗಿಲ್ಲ. ಆದರೆ, ಸರ್ಕಾರಿ ಇಲಾಖೆಗಳು ಎಸ್ಕಾಂಗಳಿಗೆ ಪಾವತಿಸಬೇಕಿರುವ 12,631 ಕೋಟಿ ರೂಪಾಯಿ ಬಾಕಿಯನ್ನು ತ್ವರಿತವಾಗಿ ಪಾವತಿಸುವುದು ಅಥವಾ ಹಣಕಾಸು ಭದ್ರತೆ (ಮೂಲಕ ಪರಿಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

ರೈತರ ಅನುಕೂಲಕ್ಕಾಗಿ ನಮ್ಮ ಸರ್ಕಾರ ಕೃಷಿ ವಿದ್ಯುತ್ ಸಹಾಯಧನವನ್ನು ವರ್ಷಕ್ಕೆ ₹22,000 ಕೋಟಿ ನೀಡುತ್ತಿದ್ದೇವೆ. ಹೀಗಾಗಿ ಫೀಡರ್ ಸೌರೀಕರಣ (, ಇಂಧನ-ದಕ್ಷ ಪಂಪ್‌ಸೆಟ್‌ಗಳ ಬಳಕೆ, ವಿದ್ಯುತ್ ಬೇಡಿಕೆ ನಿರ್ವಹಣೆ ಕಾರ್ಯಕ್ರಮಗಳನ್ನು ವೇಗಗೊಳಿಸಿ ಎನ್ನುವ ಸೂಚನೆಯನ್ನು ಸಿಎಂ ನೀಡಿದರು.

ಏನಾದರೂ ಆಗಿ ಮೊದಲು ದೇಶಭಕ್ತರಾಗಿ: ತುಮಕೂರಿನಲ್ಲಿ ಶೋಭಾ ಕರಂದ್ಲಾಜೆ ಅಭಿಪ್ರಾಯ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ವಿದ್ಯಾರ್ಥಿಗಳು ಮುಂದೆ ಯಾವುದೇ ಕ್ಷೇತ್ರದಲ್ಲಾದರೂ ಕೆಲಸ ಮಾಡಿ, ಏನಾದರೂ ಆಗಿ ಮೊದಲು ದೇಶ ಭಕ್ತರಾಗಿರಿ, ದೇಶಕ್ಕಾಗಿ ದುಡಿಯುತ್ತಿದ್ದೇನೆ ಎಂಬ ಭಾವನೆ ಇರಲಿ, ದೇಶದ ಪ್ರಗತಿಗೆ ನಿಮ್ಮ ಸಾರ್ಥಕ ಶ್ರಮ ಇರಲಿ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಮನವಿ ಮಾಡಿದರು.

ಶನಿವಾರ ನಗರದ ವಿದ್ಯಾನಿಧಿ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಹಮ್ಮಿಕೊಂಡಿದ್ದ ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರ 125ನೇ ಜನ್ಮ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರು ದೇಶದ ಅಖಂಡತೆ, ಏಕತೆಗಾಗಿ ಹೋರಾಟದ ಕಿಚ್ಚು ಹಚ್ಚಿದರು. ನೆಹರೂ ಪ್ರಧಾನಿಯಾಗಿದ್ದ ಸರ್ಕಾರದಲ್ಲಿ ಕೈಗಾರಿಕಾ ಸಚಿವರಾಗಿದ್ದ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರು ಕಾಶ್ಮೀರವನ್ನು ಬೇರ್ಪಡಿಸಿ ಒಂದು ದೇಶದಲ್ಲಿ ಎರಡು ಸಂವಿಧಾನ, ಎರಡು ಧ್ವಜ, ಎರಡು ಪ್ರಧಾನಿ ವ್ಯವಸ್ಥೆ ಧಿಕ್ಕರಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ದೇಶದ ಅಖಂಡತೆಗೆ ಹೋರಾಟ ರೂಪಿಸಿದರು ಎಂದು ಹೇಳಿದರು.

ದೇಶ ಭಕ್ತಿ ಇಲ್ಲದ ನಾಯಕರು ಅಧಿಕಾರಕ್ಕೆ ಬಂದಾಗ ದೇಶ ಹರಿದುಹಂಚಿ ಹೋಗುತ್ತದೆ. ಆದರೆ ದೇಶಭಕ್ತಿಯ ನಾಯಕರ ಆಡಳಿತದಲ್ಲಿ ದೇಶದ ನೆಲವನ್ನು ಕಾಪಾಡುತ್ತಾ ದೇಶ ರಕ್ಷಣೆಯಾಗುತ್ತದೆ. ಶ್ಯಾಮ ಪ್ರಸಾದ್ ಮುಖರ್ಜಿಯವರ ದೇಶದ ಅಖಂಡತೆ, ಏಕತೆಯ ತತ್ವಗಳ ಹಿನ್ನೆಲೆಯಲ್ಲಿ



ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರ ದೇಶದ ಭದ್ರತೆ ಕಾಪಾಡುತ್ತಿದೆ. ದೇಶದ ಆಡಳಿತ ಭಂಗ ಮಾಡುವ ಉಗ್ರರ ಹುಟ್ಟಡಗಿಸುವಲ್ಲಿ ಮೋದಿ ಸರ್ಕಾರ ಯಶಸ್ವಿಯಾಗಿದೆ ಎಂದರು.ದೇಶದ ಸ್ವಾತಂತ್ರಕ್ಕಾಗಿ ಹೋರಾಟ ಮಾಡಿದ, ತ್ಯಾಗ ಮಾಡಿದ ಮಹನೀಯರು ಯಾರು, ಅವರ ಹೋರಾಟ, ತ್ಯಾಗವೇನು ಎಂಬುದನ್ನು ಯುವಜನರು ತಿಳಿಯಬೇಕು, ಇತಿಹಾಸ ತಿಳಿದವರು ಮಾತ್ರವೇ ಇತಿಹಾಸ ಸೃಷ್ಟಿಸಬಲ್ಲರು. ದೇಶದ ಅಖಂಡತೆ, ಏಕತೆ, ದೇಶ ಮೊದಲು ಆಮೇಲೆ ಅಧಿಕಾರ ಎಂಬ ತತ್ವ ಅನುಸರಿಸಿಕೊಂಡು ಬಂದ ಡಾ. ಶ್ಯಾಮ ಪ್ರಸಾದ್ ಮುಖರ್ಜಿಯವರು ಭಾರತೀಯ ಜನಸಂಘ ಸಂಸ್ಥಾಪಕರಲ್ಲಿ ಒಬ್ಬರು, ನಂತರ ಜನಸಂಘ ಭಾರತೀಯ ಜನತಾಪಕ್ಷವಾಗಿ, ದೇಶ ಮೊದಲು ಎಂಬ ಮುಖರ್ಜಿಯವರ ತತ್ವದಡಿಯಲ್ಲಿಯೇ ಬೆಳೆಯುತ್ತಿದೆ ಎಂದು ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಶಾಸಕ ಬಿ. ಸುರೇಶ್‌ಗೌಡರು ಮಾತನಾಡಿ, ಶ್ಯಾಮ ಪ್ರಸಾದ್ ಮುಖರ್ಜಿಯವರು ಕೇವಲ ರಾಜಕಾರಣಿಯಲ್ಲದೆ ಶಿಕ್ಷಣ ತಜ್ಞರು, ಕಾನೂನು ಪಂಡಿತರು, ರಾಷ್ಟ್ರೀಯ ಚಿಂತಕರೂ ಆಗಿದ್ದರು. ಶಿಕ್ಷಣದ ಮೂಲಕವೇ ಸುಭದ್ರ ರಾಷ್ಟ್ರ ಕಟ್ಟಬಹುದು ಎಂಬ ಅಚಲ ವಿಶ್ವಾಸ ಹೊಂದಿದ್ದರು. ನೆಹರೂ ಆಡಳಿತದಲ್ಲಿ ಕೈಗಾರಿಕಾ ಸಚಿವರಾಗಿದ್ದ ಇವರು ರಾಷ್ಟ್ರದ ಹಿತಕ್ಕೆ ಧಕ್ಕೆಯಾದಾಗ ಅಧಿಕಾರ ತ್ಯಜಿಸಿ ಹೋರಾಟಕ್ಕಿಳಿದ ಮಹಾನ್ ರಾಷ್ಟ್ರ ಭಕ್ತರು ಎಂದರು.

ಶ್ಯಾಮ ಪ್ರಸಾದ್ ಮುಖರ್ಜಿಯವರ ತತ್ವಗಳು ಬಿಜೆಪಿಯ ಭದ್ರಬುನಾದಿಗೆ ಕಾರಣ. ರಾಷ್ಟ್ರದ ಹಿತ ಸರ್ವರ ಹಿತ, ಶಿಕ್ಷಣ ರಾಷ್ಟ್ರ ನಿರ್ಮಾಣದ ಶಕ್ತಿಶಾಲಿ ಆಯುಧ, ದೇಶದ ಏಕತೆ ಮತ್ತು ಅಖಂಡತೆ ರಾಜಕೀಯ ಹಿತಾಸಕ್ತಿಗಿಂಥಾ ದೊಡ್ಡದು ಎಂಬ ಸಂದೇಶವನ್ನು ಡಾ. ಶ್ಯಾಮ ಪ್ರಸಾದ್ ಮುಖರ್ಜಿ ನಮಗೆ ನೀಡಿದ್ದಾರೆ ಎಂದು ಸುರೇಶ್‌ಗೌಡರು ಹೇಳಿದರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ಶಾಸಕ ಜಿ.ಬಿ.ಜ್ಯೋತಿಗಣೇಶ್ ಮಾತನಾಡಿ, ದೇಶ ಸುಭದ್ರವಾಗಿರಬೇಕು. ಅಭದ್ರ ದೇಶದಲ್ಲಿ ಯಾವ ಸಾಧನೆಗೂ ಬೆಲೆ ಇರುವುದಿಲ್ಲ. ವಿಶ್ವದಾದ್ಯಂತ ಇಂದು ಇರುವ ವಾತಾವರಣಕ್ಕೆ ಹೋಲಿಸಿದರೆ ಭಾರತ ಸುಭದ್ರವಾಗಿದೆ. ಜನ ಸುರಕ್ಷಿತವಾಗಿದ್ದಾರೆ. ಇದಕ್ಕೆ ಕಾರಣ ಡಾ. ಶ್ಯಾಮ ಪ್ರಸಾದ್ ಮುಖರ್ಜಿಯವರ ತತ್ವ ಅಳವಡಿಸಿಕೊಂಡಿರುವ ಪ್ರಧಾನಿ ಮೋದಿಯವರ ನಾಯಕತ್ವ ಹಾಗೂ ಸದೃಢ ದೇಶ ನಿರ್ಮಾಣದ ಆಡಳಿತ ಕಾರಣ ಎಂದರು.

ದೇಶಕ್ಕಾಗಿ ತ್ಯಾಗ ಮಾಡಿದವರ ಬಗ್ಗೆ ಪಠ್ಯಗಳಲ್ಲಿ ಮಕ್ಕಳು ಓದಬೇಕು. ಆದರೆ ಈಗಿನ ಪಠ್ಯಗಳು ಪೂರ್ವಾಗ್ರಹಪೀಡಿತ ಮಾಹಿತಿ ನೀಡುತ್ತಿವೆ. ದೇಶದಲ್ಲಿ 60 ಕೋಟಿಗೂ ಹೆಚ್ಚು ಯುವಜನರಿದ್ದಾರೆ, 2047ರ ವಿಕಸಿತ ಭಾರತ ನಿರ್ಮಾಣದಲ್ಲಿ ಯುವಜನಾಂಗ ದೊಡ್ಡ ಕೊಡುಗೆ ನೀಡಬೇಕು. ಯೋಗ್ಯತೆ ಇರುವವರನ್ನು ದೇಶದಲ್ಲಿ ಆಡಳಿತ ನಡೆಸಲು ಆಯ್ಕೆ ಮಾಡಬೇಕು, ಆ ಜವಾಬ್ದಾರಿ ಯುವಜನಾಂಗದ ಮೇಲಿದೆ ಎಂದು ಜ್ಯೋತಿಗಣೇಶ್ ಹೇಳಿದರು.

ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಪ್ರಾಸ್ತಾವಿಕ ನುಡಿ ನುಡಿದರು. ರಾಜ್ಯ ಬಿಜೆಪಿ ಕಾರ್ಯದರ್ಶಿ ಅಂಬಿಕಾ ಹುಲಿನಾಯ್ಕರ್, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಬ್ಯಾಟರಂಗೇಗೌಡ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಚೈತ್ರ ಮಂಜುನಾಥ್, ವಿದ್ಯಾವಾಹಿನಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಎನ್.ಬಿ. ಪ್ರದೀಪ್‌ಕುಮಾರ್ ಸಮಾರಂಭದಲ್ಲಿ ಭಾಗವಹಿಸಿದ್ದರು.

ಸಾವಿರಾರು ಕಾನೂನು ಪದವೀಧರರು ಹೊರಬರುತ್ತಿದ್ದರೂ ನ್ಯಾಯಾಲಯಗಳಲ್ಲಿ ಲಕ್ಷಾಂತರ ಪ್ರಕರಣಗಳು ಬಾಕಿ ಉಳಿದಿರುವುದು ಕಳವಳಕಾರಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು– ದೇಶದಲ್ಲಿ 1,500ಕ್ಕೂ ಹೆಚ್ಚು ಕಾನೂನು ಕಾಲೇಜುಗಳಿದ್ದು, ಪ್ರತಿವರ್ಷ ಸಾವಿರಾರು ಕಾನೂನು ಪದವೀಧರರು ಹೊರಬರುತ್ತಿದ್ದಾರೆ. ಆದರೂ ನ್ಯಾಯಾಲಯಗಳಲ್ಲಿ ಲಕ್ಷಾಂತರ ಪ್ರಕರಣಗಳು ಬಾಕಿ ಉಳಿದಿರುವುದು ಕಳವಳಕಾರಿ. ಪ್ರಕರಣಗಳ ತ್ವರಿತ ವಿಲೇವಾರಿಗೆ ನ್ಯಾಯಾಂಗದಲ್ಲಿ ಇನ್ನಷ್ಟು ಸುಧಾರಣೆ ಅಗತ್ಯವಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ಅಭಿಪ್ರಾಯಪಟ್ಟಿದ್ದಾರೆ.

ಶೆಟ್ಟಿಹಳ್ಳಿಯ ಸುಫಿಯಾ ಕಾನೂನು ಮಹಾವಿದ್ಯಾಲಯದಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತ ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾನೂನು ಕ್ಷೇತ್ರದಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸುತ್ತಿದ್ದು, ಭಾರತೀಯ ಕಾನೂನು ತಜ್ಞರು ಜಾಗತಿಕ ವೇದಿಕೆಯಲ್ಲಿ ದೇಶವನ್ನು ಪ್ರತಿನಿಧಿಸುತ್ತಿದ್ದಾರೆ. ಇದೇ ವೇಳೆ, ದೇಶದಲ್ಲಿ ಸೈಬರ್ ಅಪರಾಧ ದೊಡ್ಡ ಸವಾಲಾಗಿದ್ದು,ಅದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಕಾನೂನುಗಳನ್ನು ಮತ್ತಷ್ಟು ಬಲಪಡಿಸಬೇಕಾಗಿದೆ ಎಂದರು.

ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಸಮಾನತೆಗೆ ಮಹತ್ವ ನೀಡಲಾಗಿದ್ದರೂ, ಕಾನೂನು ಮತ್ತು ಸಮಾಜದ ದೃಷ್ಟಿಯಲ್ಲಿ ಅದು ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎಂಬ ಬಗ್ಗೆ ಗಂಭೀರ ವಿಶ್ಲೇಷಣೆ ಅಗತ್ಯವಿದೆ. ಸ್ವಾತಂತ್ರ್ಯದ ಸಮಯದಲ್ಲಿ ದೇಶದ ಸಾಕ್ಷರತೆ ಪ್ರಮಾಣ ಕೇವಲ 12 ಶೇಕಡಾ ಇದ್ದರೆ, ಈಗ ಅದು ಸುಮಾರು ಶೇ. 80ಕ್ಕೆ ಏರಿಕೆಯಾಗಿದೆ. ಕಾನೂನು ಪದವಿ ಪಡೆದವರು ಕೇವಲ ವೃತ್ತಿ ದೃಷ್ಟಿಯಿಂದಲ್ಲ, ಕಾನೂನಿನ ರಕ್ಷಣೆ ಮತ್ತು ನ್ಯಾಯ ಸೇವೆಯ ಹೊಣೆಗಾರಿಕೆಯನ್ನು ಅರಿತು ಕಾರ್ಯನಿರ್ವಹಿಸಬೇಕು ಎಂದು ಡಾ.ಜಿ.ಪರಮೇಶ್ವರ್ ಕರೆ ನೀಡಿದರು.

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಲ್ಲಿ ಕೆಲವೇ ನ್ಯಾಯವಾದಿಗಳನ್ನು ಹೆಚ್ಚು ಮಂದಿ ಆಯ್ಕೆ ಮಾಡಿಕೊಳ್ಳುತ್ತಾರೆ. ಕಾನೂನಿನ ಆಳವಾದ ಜ್ಞಾನ ಮತ್ತು ಸಮರ್ಥವಾದ ಮಂಡನೆಯಿಂದ ಅವರು ವಿಶ್ವಾಸ ಗಳಿಸಿದ್ದಾರೆ. ಹೊಸ ತಲೆಮಾರಿನ ವಕೀಲರೂ ಅದೇ ಮಟ್ಟದ ಪರಿಣತಿ ಸಾಧಿಸಬೇಕು.ಭಾರತಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಬಲಿಷ್ಠ ಸಂವಿಧಾನವನ್ನು ನೀಡಿದ್ದು, ದೇಶದ ಪ್ರಜಾ ಪ್ರಭುತ್ವದ ಉಳಿವಿಗೆ ಸಂವಿಧಾನವೇ ಮೂಲ ಅಡಿಪಾಯವಾಗಿದೆ. ಸಂವಿಧಾನ ದುರ್ಬಲಗೊಂಡರೆ ಪ್ರಜಾಪ್ರಭುತ್ವ ವ್ಯವಸ್ಥೆಯೂ ದುರ್ಬಲವಾಗುತ್ತದೆ. ಆದ್ದರಿಂದ ಸಂವಿಧಾನದ ಮೌಲ್ಯಗಳನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಸಂವಿಧಾನದ ವಿಧಿ 51(ಎ) ಹಾಗೂ ವಿಧಿ 12 ರಿಂದ 35ರವರೆಗೆ ನಾಗರಿಕರ ಕರ್ತವ್ಯಗಳು ಹಾಗೂ ಮೂಲಭೂತ ಹಕ್ಕುಗಳ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಪ್ರತಿಯೊಬ್ಬರೂ ತಮ್ಮ ಕರ್ತವ್ಯಗಳು ಮತ್ತು ಹಕ್ಕುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಾಗ ಮಾತ್ರ ಪ್ರಜಾಪ್ರಭುತ್ವದ ಆಶಯಗಳನ್ನು ಪರಿಣಾಮಕಾರಿಯಾಗಿ



ಎತ್ತಿಹಿಡಿಯಲು ಸಾಧ್ಯ ಎಂದರು.

ಮಾಜಿ ಸಚಿವ ಹಾಗೂ ಮಧುಗಿರಿ ಕ್ಷೇತ್ರದ ಶಾಸಕ ಕೆ.ಎನ್.ರಾಜಣ್ಣ ಮಾತನಾಡಿ ನಾನು ಕೂಡು ರಾಜಕಾರಣಿಯಾಗುವ ಮೊದಲು ವಕೀಲರಾಗಿ 1984ರಿಂದ 94ವರೆಗೆ ಕ್ರಿಮಿನಲ್ ಲಾಯರ್ ಆಗಿ ಪ್ರಾಕ್ಟಿಸ್ ಮಾಡುತ್ತಿದೆ. ಕಾನೂನಿನ ಸರಳ ವ್ಯಾಖ್ಯಾನವೆಂದರೆ, ಸಾಮಾಜಿಕ ಜ್ಞಾನ.ಇಂದು ಕಾನೂನು ಪದವಿ ಪಡೆದಿರುವ ನಿಮ್ಮ ಮುಂದೆ ಗುರುತರ ಜವಾಬ್ದಾರಿಗಳಿವೆ. ಅಸಹಾಯಕರು, ಧ್ವನಿಯಿಲ್ಲದವರ ಪರ ಕೆಲಸ ಮಾಡಿದರೆ ನಿಮ್ಮ ಪದವಿಗೆ ಗೌರವ ಸಿಗುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಇದ್ದಂತೆ ಕಾನೂನು ಕ್ಷೇತ್ರದಲ್ಲಿಯೂ ಸಾಕಷ್ಟು ಬದಲಾವಣೆ ಇದೆ. ಅದಕ್ಕೆ ತಕ್ಕಂತೆ ತಾವು ಸಹ ಸಿದ್ದರಾಗಬೇಕು. ಕೋರ್ಟ್ ಕಲಾಪದ ವೇಳೆ ಹಿರಿಯ ನ್ಯಾಯವಾದಿಗಳು ವಾದ ಮಂಡಿಸುವ ವೇಳೆ ಅವುಗಳನ್ನು ಶ್ರದ್ಧೆಯಿಂದ ಆಲಿಸಿ, ಅಲ್ಲಿ ಪ್ರಸ್ತಾಪಿಸುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡರೇ, ನೀವು ವಾದ ಮಂಡಿಸುವ ವೇಳೆ ಅನುಕೂಲಕ್ಕೆ ಬರಲಿದೆ. ಪ್ರಾಮಾಣಿಕತೆ ಮತ್ತು ಸತತ ಪರಿಶ್ರಮದಿಂದ ಮಾತ್ರ ವಕೀಲರಾಗಿ ಮೇಲೆ ಬರಲು ಸಾಧ್ಯ ಎಂದರು. ಇಂದು ಕ್ರಿಮಿನಲ್ ಕೇಸುಗಳಲ್ಲಿ ಅಪರಾಧಿಗಳಾಗುತ್ತಿರುವವ ಸಂಖ್ಯೆಯಲ್ಲಿ ಹೆಚ್ಚಿನವರು ಬಡವರೇ ಆಗಿರುತ್ತಾರೆ. ಈ ಲೋಪದೋಷಕ್ಕೆ ಕಾರಣ ಏನು ಎಂಬುದು ನಿಜಕ್ಕೂ ದುಃಖದ ವಿಷಯ. ಎಲ್ಲಾ ಕ್ಷೇತ್ರಗಳಂತೆ ನ್ಯಾಯಾಂಗ ಕ್ಷೇತ್ರವೂ ಜನರ ವಿಶ್ವಾಸ ಕಳೆದುಕೊಳ್ಳುತ್ತಿರುವ ಮಾತುಗಳು ಇತ್ತೀಚಗೆ ಹೆಚ್ಚಾಗಿವೆ. ಹಾಗಾಗಿ ಜನರ ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ವಕೀಲರು ಪ್ರಾಮಾಣಿಕರಾಗಿ ಕೆಲಸ ಮಾಡಬೇಕಾಗಿದೆ ಎಂದು ಶಾಸಕ ಕೆ.ಎನ್.ರಾಜಣ್ಣ ನುಡಿದರು.

ವಿಜ್ಞಾನಿ ಡಾ.ಪ್ರಶಾಂತ ಕಾಳಪ್ಪ ಪ್ರಧಾನ ಭಾಷಣ ಮಾಡಿ, ವಿಜ್ಞಾನಕ್ಕೆ ಬಡವರು, ಶ್ರೀಮಂತರು ಎಂಬ ಭೇಧ ಭಾವವಿಲ್ಲ. ಆದರೆ ಸಮಾಜ ವಿಜ್ಞಾನದ ತಳಹದಿಯೇ ಬಡತನ, ಸಿರಿತನ, ವಿಜ್ಞಾನ ಮತ್ತು ಕಾನೂನು ಎರಡು ಕೂಡ ಸತ್ಯವನ್ನೇ ಹುಡುಕುವ ಕೆಲಸ ಮಾಡುತ್ತೇವೆ. ಪದವಿಯೆಂಬುದು ಜೀವನದ ಆರಂಭ.ಗಾಂಧಿ ಮತ್ತು ಅಂಬೇಡ್ಕರ್ ಕೋರ್ಟುಗಳಿಗಿಂತ, ಜನಸಾಮಾನ್ಯರ ನಡುವೆ ಇದ್ದೇ ಪ್ರಖ್ಯಾತರಾದರು. ಕಾನೂನು ಪದವಿಧರರು ಕಾನೂನಿನ ರಕ್ಷಕರಾಗಿ, ನ್ಯಾಯಾಂಗವನ್ನು ಮತ್ತಷ್ಟು ಗಟ್ಟಿಗೊಳಿಸುವ ಕೆಲಸ ಮಾಡಬೇಕು.ಸೋಲೆ ಗೆಲುವಿನ ಮೆಟ್ಟಿಲು ಎಂಬುದು ನಿಮಗೆ ಪಾಠವಾಗಬೇಕು.ತಂತ್ರಜ್ಞಾನವನ್ನು ತಮ್ಮ ವೃತ್ತಿ ನೈಪುಣ್ಯತೆ ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹೆಚ್.ಎಂ.ಎಸ್ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಎಸ್.ಷಫಿ ಅಹಮದ್ ಮಾತನಾಡಿ, 1980 ರಿಂದಲೂ ಹೆಚ್.ಎಂ.ಎಸ್ ಶಿಕ್ಷಣ ಸಂಸ್ಥೆ ಬಡವರು, ಶೋಷಿತರಿಗೆ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕಳೆದ 12 ವರ್ಷಗಳಿಂದ ಸೂಫಿಯಾ ಲಾ ಕಾಲೇಜು ನಡೆಯುತ್ತಿದ್ದು, ಕಾಲೇಜನ್ನು ಅನುದಾನಕ್ಕೆ ಒಳಪಡಿಸಬೇಕು, ಉಪನ್ಯಾಸಕರ ನೇಮಕಕ್ಕೆ ಅವಕಾಶ ಕಲ್ಪಿಸಬೇಕು. ಹೊಸದಾಗಿ ತುಮಕೂರಿನಲ್ಲಿ ನಿರ್ಮಾಣವಾಗುವ ನ್ಯಾಯಾಲಯ ಸಮುಚ್ಚಯದಲ್ಲಿ ಜುಡಿಷಿಯಲ್ ಹೆರಿಟೇಜ್ ಮ್ಯೂಸಿಯಂ ಸ್ಥಾಪಿಸುವಂತೆ ಕಂದಾಯ ಸಚಿವರಿಗೆ ಮನವಿ ಮಾಡಿದರು.

ಸಮಾರಂಭದಲ್ಲಿ ಹೆಚ್.ಎಂ.ಎಸ್ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಅಫ್ತಾಬ್ ಅಹಮದ್, ಸಿಇಓ ಮಹಮದ್ ಜುನೈದ್, ಸೂಫಿಯಾ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ರಮೇಶ್.ಎಸ್,ಕಾನೂನು ವಿವಿಯ ಸಿಂಡಿಕೇಟ್ ಸದಸ್ಯ ರಾಜಣ್ಣ, ಹೆಚ್.ಎಂ.ಎಸ್. ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅದೀಬ್ ಅಹಮದ್, ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಚಂದ್ರಶೇಖರ್ ಗೌಡ ಮುಂತಾದವರು ಉಪಸ್ಥಿತರಿದ್ದರು.

ಜು.6ರಂದು ಡಾ॥ ಬಾಬು ಜಗಜೀವನ ರಾಂ ಪುಣ್ಯ ಸ್ಮರಣೆ ಕಾರ್ಯಕ್ರಮ

ತುಮಕೂರು: ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ, ಭಾರತದ ಮಾಜಿ ಉಪ ಪ್ರಧಾನಿಗಳಾದ ಡಾ॥ ಬಾಬು ಜಗಜೀವನ ರಾಂ ಅವರ 40ನೇ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಜುಲೈ 6ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸರಳವಾಗಿ ಆಚರಿಸಲಾಗುವುದು.

ಕಾರ್ಯಕ್ರಮದಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಹಾಗೂ ಗಣ್ಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಮನವಿ ಮಾಡಿದ್ದಾರೆ.

ಗ್ರಾಮ ಆಡಳಿತಾಧಿಕಾರಿ ಅನಧಿಕೃತ ಗೈರು : ಸೇವೆಯಿಂದ ವಜಾಗೊಳಿಸಲು ಕ್ರಮ

ತುಮಕೂರು: ಜಿಲ್ಲೆಯ ತುಮಕೂರು ತಾಲ್ಲೂಕು ಅರಕೆರೆ ಅಂಚೆ ಅಂತರಸನಹಳ್ಳಿಯ ಮದನ ಕುಮಾರ್ ಟಿ.ಹೆಚ್. ಅವರು ಶಿರಾ ತಾಲ್ಲೂಕು ಕಚೇರಿಯಲ್ಲಿ ಗ್ರಾಮ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ 01-01-2017ರಿಂದ ಯಾವುದೇ ಪೂರ್ವಾನುಮತಿ ಪಡೆಯದೆ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ ಎಂದು ಶಿರಾ ತಾಲ್ಲೂಕು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೌಕರರನ್ನು ಕರ್ತವ್ಯಕ್ಕೆ ಹಾಜರಾಗುವಂತೆ ಇಲಾಖೆಯಿಂದ ಹಲವಾರು ಬಾರಿ ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದ್ದರೂ, ಇದುವರೆಗೆ ಯಾವುದೇ ಸ್ಪಂದನೆ ನೀಡದೇ, ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ನೌಕರರು ಸೇವೆಗೆ ಅನಧಿಕೃತ ಗೈರು ಹಾಜರಿಯಾಗುವ ಮೂಲಕ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಾರೆ. ಸೇವಾ ನಿಯಮಗಳನ್ನು ಉಲ್ಲಂಘಿಸಿರುವ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಇವರನ್ನು ಸೇವೆಯಿಂದ ವಜಾಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ನೌಕರರ ಗೈರು ಹಾಜರಿಯು ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಧಕ್ಕೆಯಾಗುತ್ತಿದೆ. ಸದರಿ ನೌಕರರೊಂದಿಗೆ ಸಾರ್ವಜನಿಕರು ಇಲಾಖೆಗೆ ಸಂಬಂಧಿಸಿದ ಯಾವುದೇ ವ್ಯವಹಾರಗಳನ್ನು ನಡೆಸಬಾರದು ಎಂದು ಅವರು ತಿಳಿಸಿದ್ದಾರೆ.

ನೀರನ್ನು ಮಿತವಾಗಿ ಬಳಸುವ ಮೂಲಕ ಜೀವಜಲವನ್ನು ಸಂರಕ್ಷಿಸೋಣ

ಭೂಮಿಯ ಮೇಲಿರುವ ಜೀವ ಸಂಕುಲಗಳಿಗೆ ಗಾಳಿ ಎಷ್ಟು ಮುಖ್ಯವೋ ನೀರು ಕೂಡ ಅಷ್ಟೇ ಮುಖ್ಯ. ನೀರಿಲ್ಲದೆ ಬದುಕನ್ನು ಕಲ್ಪಿಸಿಕೊಳ್ಳಲು ಸಹ ಸಾಧ್ಯವಿಲ್ಲ. ಆದರೆ ಇಂದು ಸಿಹಿ ನೀರಿನ ಮೂಲಗಳು ಕಲುಷಿತಗೊಳ್ಳುತ್ತಿವೆ, ಬತ್ತಿ ಹೋಗುತ್ತಿವೆ. ಹೆಚ್ಚುತ್ತಿರುವ ಈ ನೀರಿನ ಕೊರತೆಯು ಗಂಭೀರ ಕಳವಳಕಾರಿ ಸಂಗತಿಯಾಗಿದ್ದು, ಈ ನಿಟ್ಟಿನಲ್ಲಿ ಜಲಮೂಲವನ್ನು ಸಂರಕ್ಷಣೆ ಮಾಡಬೇಕು, ಭವಿಷ್ಯದ ಪೀಳಿಗೆಗಳಿಗಾಗಿ ಜೀವಜಲವನ್ನು ಕಾಪಾಡಬೇಕು ಎಂಬ ಉದ್ದೇಶದಿಂದ ಪ್ರತಿವರ್ಷ ಮಾರ್ಚ್ 22 ರಂದು ವಿಶ್ವ ಜಲ ದಿನವನ್ನು ಆಚರಿಸಲಾಗುತ್ತದೆ.

ನೀರು (ಫುಚಿಣಜಡಿ) ಜೀವನದ ಅಡಿಪಾಯ. ಭೂಮಿಯ ಮೇಲಿರುವ ಜೀವ ಸಂಕುಲಗಳ ಜೀವನವು ನೀರಿನ ಮೇಲೆಯೇ ಅವಲಂಬಿತವಾಗಿದೆ. ನೀರಿಲ್ಲದೆ ಬದುಕನ್ನು ಕಲ್ಪಿಸಿಕೊಳ್ಳಲು ಸಹ ಸಾಧ್ಯವಿಲ್ಲ. ಹೌದು ನಮ್ಮ ದಿನನಿತ್ಯದ ಜೀವನ ಆರಂಭವಾಗುವುದೇ ನೀರಿನಿಂದ. ನಾಗರಿಕತೆಗಳು ಅಭಿವೃದ್ಧಿ ಹೊಂದಿರುವುದು ಸಹ ನೀರಿನ ಮೂಲಗಳ ಬಳಿ. ಹೀಗೆ ನೀರು ಜೀವನಕ್ಕೆ ಜನ್ಮ ನೀಡಿದ್ದು ಮಾತ್ರವಲ್ಲದೆ ಸಂಸ್ಕೃತಿ, ಆರ್ಥಿಕತೆ ಮತ್ತು ಸಮಾಜವನ್ನು ಸಹ ರೂಪಿಸಿತು. ಆದರೆ ಇಂದು ಇದೇ ನೀರಿನ ಮೂಲ ಮಾನವನ ಸ್ವಾರ್ಥದ ಕಾರಣದಿಂದಾಗಿ ಅಪಾಯದ ಅಂಚಿನಲ್ಲಿನಲ್ಲಿದೆ. ನದಿ, ಕೆರೆಗಳಂತಹ ಸಿಹಿ ನೀರಿನ ಮೂಲಗಳು ಕುಲುಷಿತಗೊಳ್ಳುತ್ತಿವೆ, ಬತ್ತಿ ಹೋಗುತ್ತಿವೆ, ಅಂತರ್ಜಲವು ಅತ್ಯಂತ ವೇಗವಾಗಿ ಕ್ಷೀಣಿಸುತ್ತಿದೆ. ಅಷ್ಟೇ ಅಲ್ಲದೆ ಪ್ರಪಂಚದ ಅನೇಕ ಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ತೀವ್ರ ಕೊರತೆ ಕೂಡ ಎದುರಾಗುತ್ತಿವೆ. ನೀರಿನ ಈ ಗಂಭೀರ ಸಮಸ್ಯೆಯನ್ನು ಪರಿಗಣಿಸಿ, ಜಲಜೀವವನ್ನು ಭವಿಷ್ಯದ ಪೀಳಿಗೆಗಾಗಿ ಸಂರಕ್ಷಿಸಬೇಕು ಎನ್ನುವ ನಿಟ್ಟಿನಲ್ಲಿ ನೀರಿನ ಮಹತ್ವ, ಅದರ ಸಂರಕ್ಷಣೆ ಮತ್ತು ಶುದ್ಧ ನೀರಿನ ಲಭ್ಯತೆಯ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಮಾರ್ಚ್ 22 ರಂದು ವಿಶ್ವ ಜಲ ದಿನವನ್ನು ಆಚರಿಸಲಾಗುತ್ತದೆ.

ವಿಶ್ವ ಜಲ ದಿನದ ಇತಿಹಾಸವೇನು?

ವಿಶ್ವ ಜಲ ದಿನವನ್ನು 1992 ರಲ್ಲಿ ವಿಶ್ವಸಂಸ್ಥೆಯು ಪ್ರಾರಂಭಿಸಿತು. 1992 ರಲ್ಲಿ ಬ್ರೆಜಿಲ್‌ನ ರಿಯೊ ಡಿ ಜನೈರೊದಲ್ಲಿ ನಡೆದ ಭೂ ಶೃಂಗಸಭೆಯು ನೀರಿನ ಸಂರಕ್ಷಣೆಗಾಗಿ ಜಾಗತಿಕ ಉಪಕ್ರಮವನ್ನು ಪ್ರಾರಂಭಿಸಿತು. ಇದರ ನಂತರ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಾರ್ಚ್ 22 ರಂದು ವಿಶ್ವ ಜಲ ದಿನವನ್ನು ಆಚರಿಸುವುದಾಗಿ ಘೋಷಿಸಿತು. ಆನಂತರ ಪ್ರತಿವರ್ಷ ವಿಶ್ವ ಜಲ ದಿನವನ್ನು ಆಚರಿಸುತ್ತಾ ಬರಲಾಗುತ್ತಿದೆ. ಈ ಜಾಗೃತಿ ದಿನ ನೀರು



ಅಮೂಲ್ಯವಾದ ಸಂಪತ್ತು ಅದನ್ನು ಉಳಿಸಿ, ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂಬುದನ್ನು ನೆನಪಿಸುತ್ತದೆ.

ವಿಶ್ವ ಜಲ ದಿನದ ಮಹತ್ವವೇನು?

ವಿಶ್ವ ಜಲ ದಿನವು ನೀರು ಕೇವಲ ಒಂದು ಸಂಪನ್ಮೂಲವಲ್ಲ, ನಮ್ಮ ಜೀವನದ ಅಡಿಪಾಯ ಎಂದು ನಮಗೆ ನೆನಪಿಸುತ್ತದೆ. ಭವಿಷ್ಯದ ಪೀಳಿಗೆಗೆ ಅದರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಅದನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂಬುದರ ಬಗ್ಗೆ ಈ ದಿನ ಜಾಗೃತಿ ಮೂಡಿಸಲಾಗುತ್ತದೆ.

ನೀರಿನ ಮಹತ್ವ, ಅದರ ಸಂರಕ್ಷಣೆ ಮತ್ತು ಶುದ್ಧ ನೀರಿನ ಲಭ್ಯತೆಯ ಬಗ್ಗೆ ಜಾಗೃತಿ ಮೂಡಿಸುವುದು ವಿಶ್ವ ಜಲ ದಿನವನ್ನು ಆಚರಿಸುವ ಮುಖ್ಯ ಉದ್ದೇಶವಾಗಿದೆ.

ಈ ದಿನದಂದು, ಶಾಲೆಗಳು, ಕಾಲೇಜುಗಳು ಮತ್ತು ವಿವಿಧ ಸಂಸ್ಥೆಗಳಲ್ಲಿ ಜಾಗೃತಿ ಕಾರ್ಯಕ್ರಮಗಳು, ರ್‍ಯಾಲಿಗಳು ಮತ್ತು ಅಭಿಯಾನಗಳನ್ನು ಆಯೋಜಿಸಲಾಗುತ್ತದೆ. ನೀರನ್ನು ಸಂರಕ್ಷಿಸಲು, ಮಳೆನೀರನ್ನು ಕೊಯ್ಲು ಮಾಡಲು ಮತ್ತು ನೀರನ್ನು ವಿವೇಚನೆಯಿಂದ ಬಳಸಲು ಜನರನ್ನು ಪ್ರೋತ್ಸಾಹಿಸಲಾಗುತ್ತದೆ.

ನೀರು ಹರಿಯುವ ಕಡೆ ಸಮಾನತೆ ಬೆಳೆಯುತ್ತದೆ.

ಜಾಗತಿಕ ನೀರಿನ ಬಿಕ್ಕಟ್ಟು ಎಲ್ಲರ ಮೇಲೂ ಪರಿಣಾಮ ಬೀರುತ್ತದೆ – ಆದರೆ ಸಮಾನವಾಗಿ ಅಲ್ಲ.

ಮನೆಯ ಹತ್ತಿರದಲ್ಲಿ ಜನರಿಗೆ ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯದ ಕೊರತೆಯಿರುವಲ್ಲಿ, ಅಸಮಾನತೆಗಳು ಹೆಚ್ಚಾಗುತ್ತವೆ, ಮಹಿಳೆಯರು ಮತ್ತು ಹುಡುಗಿಯರು ಇದರ ಹೊರೆಯನ್ನು ಹೊರುತ್ತಾರೆ.

ಅವರು ನೀರನ್ನು ಸಂಗ್ರಹಿಸುತ್ತಾರೆ.

ಅವರು ನೀರನ್ನು ನಿರ್ವಹಿಸುತ್ತಾರೆ.

ಅವರು ಅಸುರಕ್ಷಿತ ನೀರಿನಿಂದ ಅಸ್ವಸ್ಥರಾದ ಜನರನ್ನು ನೋಡಿಕೊಳ್ಳುತ್ತಾರೆ.

ಅವರು ಸಮಯ, ಆರೋಗ್ಯ, ಸುರಕ್ಷತೆ ಮತ್ತು ಅವಕಾಶಗಳನ್ನು ಕಳೆದುಕೊಳ್ಳುತ್ತಾರೆ.

ಮತ್ತು ತುಂಬಾ ಬಾರಿ, ನೀರನ್ನು ನಿಯಂತ್ರಿಸುವ ವ್ಯವಸ್ಥೆಗಳು ಮಹಿಳೆಯರು ಮತ್ತು ಹುಡುಗಿಯರನ್ನು ನಿರ್ಧಾರ ತೆಗೆದುಕೊಳ್ಳುವಿಕೆ, ನಾಯಕತ್ವ, ಹಣಕಾಸು ಮತ್ತು ಪ್ರಾತಿನಿಧ್ಯದಿಂದ ಹೊರಗಿಡುತ್ತವೆ.

ಇದು ನೀರಿನ ಬಿಕ್ಕಟ್ಟನ್ನು ಮಹಿಳೆಯರ ಬಿಕ್ಕಟ್ಟನ್ನಾಗಿ ಮಾಡುತ್ತದೆ.

ಈ ಸವಾಲುಗಳನ್ನು ಪರಿಹರಿಸಲು ನಮಗೆ ಪರಿವರ್ತನಾತ್ಮಕ, ಹಕ್ಕು ಆಧಾರಿತ ವಿಧಾನದ ಅಗತ್ಯವಿದೆ, ಅಲ್ಲಿ ಮಹಿಳೆಯರ ಧ್ವನಿಯನ್ನು ಕೇಳಲಾಗುತ್ತದೆ ಮತ್ತು ಅವರ ಸಂಸ್ಥೆಯನ್ನು ಗುರುತಿಸಲಾಗುತ್ತದೆ.

ನೀರಿನ ನಾಯಕತ್ವದ ಎಲ್ಲಾ ಹಂತಗಳಲ್ಲಿ ಎಲ್ಲಾ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ನೀಡಬೇಕು – ಪ್ರತಿಯೊಂದು ಪೈಪ್ ಮತ್ತು ನೀತಿಯನ್ನು ವಿನ್ಯಾಸಗೊಳಿಸಲು ಸಹಾಯ ಮಾಡಬೇಕು.

ವತ್ತು ಮಹಿಳೆಯರು ಎಂಜಿನಿಯರ್‌ಗಳು, ರೈತರು, ವಿಜ್ಞಾನಿಗಳು, ನೈರ್ಮಲ್ಯ ಕಾರ್ಯಕರ್ತರು ಮತ್ತು ಸಮುದಾಯದ ನಾಯಕರಾಗಿ ನೀರಿನಲ್ಲಿ ಬದಲಾವಣೆಗೆ ಚಾಲನೆ ನೀಡಬೇಕು.

ಬದಲಾಗುತ್ತಿರುವ ಹವಾಮಾನ ಮತ್ತು ಜಲ ಸಂಬಂಧಿತ ವಿಪತ್ತುಗಳಿಂದ ಹಿಡಿದು ಹಣಕಾಸಿನ ಕೊರತೆಗಳು, ಸಾಮಾಜಿಕ ರೂಢಿಗಳಿಂದ ಆಡಳಿತದ ಅಂತರಗಳವರೆಗೆ ನಾವು ಹೆಚ್ಚುತ್ತಿರುವ ಅಪಾಯಗಳನ್ನು ಎದುರಿಸುತ್ತಿರುವಾಗ, ನೀರನ್ನು ಸಾಮಾನ್ಯ ಒಳಿತಾಗಿ ನಿರ್ವಹಿಸುವುದು ಮತ್ತು ಭವಿಷ್ಯಕ್ಕಾಗಿ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುವಲ್ಲಿ ಪ್ರತಿಯೊಬ್ಬರೂ ತಮ್ಮ ಪೂರ್ಣ ಪಾತ್ರವನ್ನು ವಹಿಸುವುದು ನಮಗೆ ಅಗತ್ಯವಾಗಿದೆ.

ಎಲ್ಲರಿಗೂ ಸುರಕ್ಷಿತ ನೀರು, ನೈರ್ಮಲ್ಯ ಮತ್ತು ನೈರ್ಮಲ್ಯವನ್ನು ಉತ್ತೇಜಿಸುವಲ್ಲಿ ಮತ್ತು ಮಹಿಳೆಯರು ಮತ್ತು ಹುಡುಗಿಯರನ್ನು ಹಿಂದಕ್ಕೆ ಎಳೆಯುವ ರೂಢಿಗಳು ಮತ್ತು ನಡವಳಿಕೆಗಳನ್ನು ಪ್ರಶ್ನಿಸುವಲ್ಲಿ ಪುರುಷರು ಮತ್ತು ಹುಡುಗರನ್ನು ಮಿತ್ರರನ್ನಾಗಿ ತೊಡಗಿಸಿಕೊಳ್ಳುವುದು ಇದರಲ್ಲಿ ಸೇರಿದೆ.



ಆಗ ಮಾತ್ರ ಸುರಕ್ಷಿತ ನೀರಿನ ಸೇವೆಗಳು ಪ್ರತಿಯೊಬ್ಬರ ಅಗತ್ಯಗಳನ್ನು ಪೂರೈಸಬಹುದು – ಮಹಿಳೆಯರು ಮತ್ತು ಹುಡುಗಿಯರು ಆರೋಗ್ಯಕರ, ಹೆಚ್ಚು ಸಾರ್ಥಕ ಜೀವನವನ್ನು ನಡೆಸಲು ಸಬಲೀಕರಣಗೊಳಿಸಬಹುದು – ಮತ್ತು ನಮ್ಮೆಲ್ಲರಿಗೂ ಪ್ರಯೋಜನಕಾರಿಯಾದ ಸುಸ್ಥಿರ ಅಭಿವೃದ್ಧಿ ಮತ್ತು ಲಿಂಗ ಸಮಾನತೆಗೆ ನೀರನ್ನು ಒಂದು ಶಕ್ತಿಯನ್ನಾಗಿ ಮಾಡಬಹುದು.

2026 ರ ವಿಶ್ವ ಜಲ ದಿನದ ಪ್ರಮುಖ ಸಂದೇಶಗಳು

ಜಾಗತಿಕ ನೀರಿನ ಬಿಕ್ಕಟ್ಟು ಎಲ್ಲರ ಮೇಲೂ ಪರಿಣಾಮ ಬೀರುತ್ತದೆ – ಆದರೆ ಸಮಾನವಾಗಿ ಅಲ್ಲ. ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯದ ಮಾನವ ಹಕ್ಕುಗಳು ಜನರಿಗೆ ಇಲ್ಲದಿರುವಲ್ಲಿ, ಅಸಮಾನತೆಗಳು ಹೆಚ್ಚಾಗುತ್ತಿವೆ, ಮಹಿಳೆಯರು ಮತ್ತು ಹುಡುಗಿಯರು ಇದರ ಹೊರೆಯನ್ನು ಹೊರುತ್ತಿದ್ದಾರೆ. ಮಹಿಳೆಯರು ಮತ್ತು ಹುಡುಗಿಯರನ್ನು ನೀರಿನ ಪರಿಹಾರಗಳಲ್ಲಿ ಕೇಂದ್ರೀಕರಿಸುವ ಸಮಯ ಇದು.

ಮಹಿಳೆಯರು ನೀರಿನ ಭವಿಷ್ಯವನ್ನು ರೂಪಿಸಬೇಕು. ಜಲ ಸೇವೆಗಳು ಹವಾಮಾನ ಬದಲಾವಣೆಯನ್ನು ತಡೆದುಕೊಳ್ಳಬೇಕು ಮತ್ತು ಪ್ರತಿಯೊಬ್ಬರ ಅಗತ್ಯಗಳನ್ನು ಪೂರೈಸಬೇಕು. ನೀರಿನ ಬಿಕ್ಕಟ್ಟನ್ನು ಪರಿಹರಿಸಲು ನಮಗೆ ಪರಿವರ್ತನಾತ್ಮಕ, ಹಕ್ಕು ಆಧಾರಿತ ವಿಧಾನದ ಅಗತ್ಯವಿದೆ, ಅಲ್ಲಿ ಮಹಿಳೆಯರ ಧ್ವನಿಗಳು, ನಾಯಕತ್ವ ಮತ್ತು ಸಂಸ್ಥೆಯನ್ನು ಸಂಪೂರ್ಣವಾಗಿ ಗುರುತಿಸಲಾಗುತ್ತದೆ.


ನೀರು ಹರಿಯುವ ಸ್ಥಳದಲ್ಲಿ ಸಮಾನತೆ ಬೆಳೆಯುತ್ತದೆ. ನೀರಿನ ನಿರ್ಧಾರಗಳಲ್ಲಿ ಮಹಿಳೆಯರು ಮತ್ತು ಹುಡುಗಿಯರು ಸಮಾನ ಧ್ವನಿಯನ್ನು ಹೊಂದಿರುವಾಗ, ಸೇವೆಗಳು ಹೆಚ್ಚು ಅಂತರ್ಗತ, ಸುಸ್ಥಿರ ಮತ್ತು ಪರಿಣಾಮಕಾರಿಯಾಗುತ್ತವೆ. ನಮಗೆಲ್ಲರಿಗೂ ಪ್ರಯೋಜನವಾಗುವ ಆರೋಗ್ಯಕರ, ಹೆಚ್ಚು ಸಮೃದ್ಧ, ಲಿಂಗ–ಸಮಾನ ಭವಿಷ್ಯಕ್ಕಾಗಿ ನೀರನ್ನು ಶಕ್ತಿಯನ್ನಾಗಿ ಮಾಡಲು ನಾವು ಮಹಿಳಾ ನಾಯಕತ್ವದಲ್ಲಿ ಹೂಡಿಕೆ ಮಾಡಬೇಕು.

ಜಗತ್ತಿನ ಏಳು ಅದ್ಭುತಗಳಂತೆ ಭಾರತದ ಏಳು ಸಾಮಾಜಿಕ ಅದ್ಭುತಗಳನ್ನು ಹುಡುಕುವ ಒಂದು

1) ಇಡೀ ಆಡಳಿತ ವ್ಯವಸ್ಥೆ ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿದ್ದರೂ ಅದಕ್ಕೆ ದಾಖಲೆಗಳಿಲ್ಲ, ಶಿಕ್ಷೆಯಾಗುತ್ತಿಲ್ಲ. ದೊಡ್ಡ ಪ್ರಮಾಣದ ಪ್ರತಿಭಟನೆ ಅಥವಾ ಸಾರ್ವಜನಿಕ ಆಕ್ರೋಶಗಳು ಕಾಣುತ್ತಿಲ್ಲ. ಹಾಗಾದರೆ ವ್ಯವಸ್ಥೆ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದೆಯೇ ಎಂದರೆ ಖಂಡಿತ ಇಲ್ಲ. ಲಂಚವಿಲ್ಲದೆ ಯಾವುದೇ ಕೆಲಸ ಆಗುವುದಿಲ್ಲ. ಹಾಗಾದರೆ ಏನಿದು ಮಾಯೆ. ಇದೇ ಒಂದು ಅದ್ಭುತವಲ್ಲವೇ.....

2) ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬೆಂಬಲಿಸಿ, ವೈಜ್ಞಾನಿಕ ಪ್ರಜ್ಞೆ ಮೂಡಿಸಿ, ನಿಷ್ಪಕ್ಷಪಾತವಾಗಿ ವಿವೇಚನೆಯಿಂದ ಸುದ್ದಿಗಳನ್ನು ಪ್ರಸಾರ ಮಾಡುತ್ತಾ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಬೇಕಾದ ಮಾಧ್ಯಮಗಳು ಅದಕ್ಕೆ ವಿರುದ್ಧವಾಗಿ ಸರ್ವಾಧಿಕಾರವನ್ನು ಬೆಂಬಲಿಸುತ್ತಾ, ಪಕ್ಷಪಾತವಾಗಿ ವರ್ತಿಸುತ್ತಾ, ಮೌಢ್ಯಗಳನ್ನು ಬಿತ್ತುತ್ತಾ, ಸಾರ್ವಜನಿಕರನ್ನು ಹಿಂಸೆಗೆ ಪ್ರಚೋದಿಸುತ್ತಾ, ವಿವೇಚನಾ ರಹಿತ ಚರ್ಚೆಗಳನ್ನು ಮಾಡುತ್ತಾ ಇದ್ದರೂ ಸಾರ್ವಜನಿಕರು, ಅಧಿಕಾರಿಗಳು, ಬುದ್ಧಿಜೀವಿಗಳು, ಧಾರ್ಮಿಕ ನಾಯಕರು ದೊಡ್ಡ ಪ್ರಮಾಣದಲ್ಲಿ ಅದರ ವಿರುದ್ಧ ಧ್ವನಿ ಎತ್ತದೇ ಮೌನವಾಗಿ ಇದ್ದು ತಾವು ಮಾತ್ರ ಪ್ರಖಾಂಡ ಪಂಡಿತರು ಎಂಬಂತೆ ಸಾರ್ವಜನಿಕವಾಗಿ ಬಿಂಬಿಸಿಕೊಳ್ಳುವುದು ಸೋಜಿಗವಲ್ಲವೇ. ಇದು ಒಂದು ಅದ್ಭುತ....

3) ಇತಿಹಾಸವನ್ನು ಯಾವ ಅಧೀಕೃತ ಮಾನದಂಡಗಳ ಆಧಾರದ ಮೇಲೆ ದಾಖಲಿಸಲಾಗುತ್ತದೆ ಎಂಬುದರ ಸಾಮಾನ್ಯ ಜ್ಞಾನವೂ ಇಲ್ಲದೇ, ಯಾರೋ ಬರೆದ ಅವರ ಅನುಭವಗಳ ಪುಸ್ತಕ, ಯಾರದೋ ಭಾವನೆಗಳ ಪತ್ರಗಳು, ಯಾರದೋ ಅಭಿಪ್ರಾಯಗಳ ಭಾಷಣಗಳು, ಇನ್ಯಾರದೋ ವಿಮರ್ಶೆಗಳು, ಮತ್ಯಾವುದೋ ಸಿನಿಮಾಗಳ ಆಧಾರದ ಮೇಲೆ ಹಾದಿ ಬೀದಿಯಲ್ಲಿ, ಮಾಧ್ಯಮಗಳಲ್ಲಿ, ಅಧ್ಯಯನ, ಚಿಂತನೆ, ವಾಸ್ತವಿಕ ಪ್ರಜ್ಞೆ, ಜವಾಬ್ದಾರಿ ಏನೂ ಇಲ್ಲದೇ ಚರ್ಚಿಸುತ್ತಾ, ಅದರ ಕಾರಣದಿಂದಾಗಿ ಸಮಾಜದ ಶಾಂತಿ ಕದಡಿ ಯಾರದೋ



ವ್ಯಕ್ತಿತ್ವಗಳನ್ನು ಕುಗ್ಗಿಸುತ್ತಾ – ಹಿಗ್ಗಿಸುತ್ತಾ – ಘಟನೆಗಳನ್ನು ವೈಭವೀಕರಿಸುತ್ತಾ, ಸಂಘರ್ಷಮಯ ವಾತಾವರಣ ಸೃಷ್ಟಿಯಾಗುತ್ತಿದ್ದರೂ, ಜನ ಮಾತ್ರ ತಣ್ಣಗೆ ಇದು ತಮಗೆ ಸಂಬಂಧಿಸಿಲ್ಲ ಎಂದು ತಮ್ಮ ಪಾಡಿಗೆ ತಾವು ಬದುಕುತ್ತಿರುವುದು ಒಂದು ಆಶ್ಚರ್ಯಕರ ವಿದ್ಯಮಾನವಲ್ಲವೇ..

ಇದೂ ಒಂದು ಅದ್ಭುತ...

4) ಹುಟ್ಟಿನಿಂದ ಯಾರೂ ಮೇಲಲ್ಲ ಅಥವಾ ಕೀಳಲ್ಲ ಎಂದು ಗೊತ್ತಿದ್ದರೂ, ಇಡೀ ವ್ಯವಸ್ಥೆಯ ಎಲ್ಲಾ ಚಟುವಟಿಕೆಗಳು ಬಹುತೇಕ ಜಾತಿಯ ಆಧಾರದ ಮೇಲೆಯೇ ನಡೆಯುತ್ತಿದ್ದರೂ, ಜಾತಿ ವ್ಯವಸ್ಥೆಯ ವಿರುದ್ಧ ಎಲ್ಲರೂ ಮಾತನಾಡುತ್ತಾ, ಆಂತರ್ಯದಲ್ಲಿ ಅದರ ಬಗ್ಗೆ ಅಭಿಮಾನ ಹೊಂದಿ ಅದನ್ನೇ ತಮ್ಮ ಐಡೆಂಟಿಟಿ ಮಾಡಿಕೊಂಡು ಬದುಕುತ್ತಿರುವ ಮುಖವಾಡಗಳು ತಮ್ಮದೇ ಆತ್ಮಗಳಿಗೆ ತಿಳಿಯುತ್ತಿಲ್ಲ ಎಂಬುದೇ ಒಂದು ಅದ್ಭುತ....

5) ಪರರ ಹಣ, ಆಸ್ತಿ, ಒಡವೆ ಎಲ್ಲವೂ ಹೇಸಿಗೆಗೆ ಸಮಾನ. ನಾವು ದುಡಿದ – ನಮ್ಮ ಶ್ರಮದ ಸಂಪತ್ತಿನ ಮೇಲೆ ಮಾತ್ರ ನಮಗೆ ಅನುಭವಿಸುವ ಅಧಿಕಾರ ಇರುವುದು, ಮಾನವನ ಬದುಕಿನ ಸಾರ್ಥಕತೆ ಅಡಗಿರುವುದು ದಾನ, ಧರ್ಮ, ನ್ಯಾಯ, ನೀತಿ, ಕರಣೆ, ಕ್ಷಮೆ, ತ್ಯಾಗ, ಸತ್ಯ, ಸರಳತೆ, ಪ್ರಾಮಾಣಿಕತೆ ಎಂಬ ಮಾನವೀಯ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಎಂಬ ತತ್ವಗಳನ್ನು ನಾವು ಪೂಜಿಸುವ – ಆರಾಧಿಸುವ – ಅಭಿಮಾನಿಸುವ – ಗೌರವಿಸುವ – ಬೆಂಬಲಿಸುವ – ಇಷ್ಟಪಡುವ ಎಲ್ಲರೂ ಹೇಳಿದ್ದಾರೆ ಮತ್ತು ಅದನ್ನು ನಾವು ಒಪ್ಪುತ್ತೇವೆ ಸಹ. ಆದರೂ ಇಡೀ ಸಮಾಜ ಕೆಲವರನ್ನು ಹೊರತುಪಡಿಸಿ ಬಹುತೇಕ ಇದಕ್ಕೆ ವಿರುದ್ಧ ನಡವಳಿಕೆಗಳನ್ನು ಅನುಸರಿಸುತ್ತಿದೆ. ಇಷ್ಟೊಂದು ವೈರುಧ್ಯಗಳ ಮಧ್ಯೆ ನಾವು ಜೀವಿಸುತ್ತಿರುವುದು ಒಂದು ಅದ್ಭುತವಲ್ಲವೇ...

6) ಪ್ರಕೃತಿಯೇ ದೇವರು, ಹೆಣ್ಣು ದೇವತೆ, ಅನ್ನ ಆಹಾರ ದೇವರು, ನೀರು ಗಾಳಿ ದೇವರು, ಮಣ್ಣು ದೇವರು, ಅನ್ನದಾತ ದೇವರು, ಗುರುಗಳು ದೇವರು, ವೈದ್ಯ ದೇವರು, ಅಪ್ಪ ಅಮ್ಮ ದೇವರು ಜೊತೆಗೆ ಕಾಣದ ಒಂದು ಬಲವಾದ ದೈವಿಕ ಶಕ್ತಿ ನಮ್ಮನ್ನು ಗಮನಿಸುತ್ತಿದೆ ಎಂಬ ಬಲವಾದ ನಂಬಿಕೆ ಬೇರೂರಿರುವ ಸಮಾಜದಲ್ಲಿ ಇಷ್ಟೊಂದು ಅನ್ಯಾಯ, ಅಕ್ರಮ, ಶೋಷಣೆ, ಕೊಲೆ, ಅತ್ಯಾಚಾರ, ಅನಾಥಾಶ್ರಮ, ವೃದ್ಧಾಶ್ರಮ, ಪೋಲೀಸ್, ಕೋರ್ಟ್, ಸಿಸಿಟಿವಿ ಎಲ್ಲವೂ ದೊಡ್ಡ ಪ್ರಮಾಣದಲ್ಲಿ ಇರುವುದು ಏಕೆ ಮತ್ತು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಇವುಗಳು ಇದ್ದರೂ ಇನ್ನೂ ಹೆಚ್ಚು ಕೆಟ್ಟ ಘಟನೆಗಳು ನಿರಾತಂಕವಾಗಿ ನಡೆಯುತ್ತಿರುವುದು ಸಹ ಅದ್ಭುತ ಅಲ್ಲವೇ....

7) ಯಾವ ಧರ್ಮಗಳು (ಮತಗಳು) ಸಮಾಜವನ್ನು – ಜನರನ್ನು ಒಂದುಗೂಡಿಸಿ ಮಾನವೀಯ ಮೌಲ್ಯಗಳ ಆಧಾರದ ಮೇಲೆ ಶಾಂತಿ, ನೆಮ್ಮದಿ, ಸೌಹಾರ್ದತೆಯಿಂದ ಈ ಸಮುದಾಯಗಳನ್ನು ಮುನ್ನಡೆಸಬೇಕಾಗಿತ್ತೋ, ಅದೇ ಧರ್ಮಗಳು ಇಂದು ಇಡೀ ಸಮಾಜವನ್ನು ಅಗ್ನಿ ಕುಂಡವಾಗಿ ಮಾರ್ಪಡಿಸಿರುವಾಗ, ಈಗಲೂ ನಮ್ಮ ಧರ್ಮವೇ ಶ್ರೇಷ್ಠ ಎಂಬ ವ್ಯಸನಕ್ಕೆ ಬಿದ್ದಿರುವುದು ಒಂದು ಕೌತುಕ. ಕಳೆದ 5000 ವರ್ಷಗಳಲ್ಲಿ ಅಂದಾಜು ಸುಮಾರು 15000 ಯುದ್ಧಗಳು ನಡೆದಿವೆ ಎಂದು ಅಂದಾಜು. ಇದರಲ್ಲಿ ಬಹುತೇಕ ಧರ್ಮಗಳ ಕಾರಣದಿಂದಲೇ ಆಗಿವೆ. ಆದರೂ ಜನ ಪಾಠ ಕಲಿಯಲಿಲ್ಲ ಎಂಬುದೇ ಒಂದು ಅದ್ಭುತ....

ಕ್ಷಮಿಸಿ ಈ ಅದ್ಭುತಗಳು ಮಾತ್ರವಲ್ಲ ಈ ಸಮಾಜದಲ್ಲಿ ಜಗತ್ತಿಗೇ ಮಾರ್ಗದರ್ಶನಾದ ಒಳ್ಳೆಯ ಏಳು ಅದ್ಭುತಗಳು ಸಹ ಇವೆ. ಆದರೆ ಮನಸ್ಸುಗಳ ಅಂತರಂಗದ ಚಳವಳಿಯ ಅವಶ್ಯಕತೆ ಇರುವುದು ಕೆಟ್ಟದ್ದನ್ನು ಒಳ್ಳೆಯದಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಜಾಗೃತ ಗೊಳಿಸುವುದು. ಒಳ್ಳೆಯದು ಇದ್ದಹಾಗೇ ಇರಲಿ. ಅದನ್ನು ಪ್ರೋತ್ಸಾಹಿಸೋಣ. ಹಾಗೆಯೇ ಕೆಟ್ಟದ್ದನ್ನು ಗುರುತಿಸಿ ಅದನ್ನು ಜನರ ಮನಸ್ಸಿಗೆ ಚುಚ್ಚಿ ಬಡಿದೆಬ್ಬಿಸಿ ಒಂದಷ್ಟು ಪರಿವರ್ತನೆ ಮಾಡುವ ಆಶಯದಿಂದ ಆತ್ಮಸಾಕ್ಷಿಯ ಜಾಗೃತಿಗಾಗಿ ಇದನ್ನು ಹೇಳಬೇಕಾಗಿದೆ.

ಆದ್ದರಿಂದ ಈ ಅಂಶಗಳ ಮಂಥನಕ್ಕಾಗಿ ಭಾರತೀಯ ಸಮಾಜದ ಏಳು ಅದ್ಭುತಗಳ ಒಂದು ನೋಟ.......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ಮನಗಳಲ್ಲಿ – ಮನೆಗಳಲ್ಲಿ – ಮತಗಳಲ್ಲಿ – ಪರಿವರ್ತನೆಗಾಗಿ,
ಮನಸ್ಸುಗಳ ಅಂತರಂಗದ ಚಳವಳಿ,
ವಿವೇಕಾನಂದ. ಎಚ್. ಕೆ.


ನಿಲುವು, ಸಂಸ್ಕೃತಿ ಮತ್ತು ದ್ವಂದ್ವ ಒಂದು ಪ್ರಶ್ನೆ

ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ ವಲಯದಲ್ಲೂ, ಸಾಮಾಜಿಕ ಜಾಲತಾಣಗಳಲ್ಲೂ ಲೇಖಕಿ ಭಾನು ಮುಷ್ತಾಕ್ ಅವರ ಹೇಳಿಕೆಗಳು ಮತ್ತು ನಡೆಗಳು ದೊಡ್ಡ ಚರ್ಚೆಗೆ ಕಾರಣವಾಗಿವೆ. ಈ ಚರ್ಚೆ ಕೇವಲ ವ್ಯಕ್ತಿಯ ಬಗ್ಗೆ ಅಲ್ಲ ಅದು ನಮ್ಮ ಸಂಸ್ಕೃತಿ, ನಂಬಿಕೆಗಳು ಮತ್ತು ನಿಲುವುಗಳ ಬಗ್ಗೆ ಕೂಡ ಒಂದು ಪ್ರಶ್ನೆ ಎತ್ತುತ್ತದೆ.

ಗೌರವ ಮತ್ತು ಅಭಿವ್ಯಕ್ತಿ

ಡಾ.ಬಿ.ಆರ್ ಅಂಬೇಡ್ಕರ್ ಅವರು ಭಾರತದ ಮಹಾನ್ ಚಿಂತಕ, ಸಮಾಜ ಸುಧಾರಕ, ಸಂವಿಧಾನದ ಶಿಲ್ಪಿ. ಅವರ ಭಾವಚಿತ್ರಕ್ಕೆ ಗೌರವ ಸಲ್ಲಿಸುವುದು ಒಂದು ಸಾಮಾನ್ಯ ಸಾಮಾಜಿಕ ಮೌಲ್ಯ. ಅವರ ಮುಂದೆ ಚಪ್ಪಲಿ ಧರಿಸಿ ನಿಂತು ಗೌರವ ಸಲ್ಲಿಸುವುದು ಇದನ್ನು ಕೆಲವರು ವೈಯಕ್ತಿಕ ಅಭಿವ್ಯಕ್ತಿ ಎಂದು ಹೇಳಬಹುದು. ಅದಕ್ಕೆ ವಿರೋಧ ವ್ಯಕ್ತ ಬಂದ ತಕ್ಷಣ "ಚಪ್ಪಲಿಗಳು ನನ್ನ ಮನೆಯ ದೇವರು" ಎಂದು ಹೇಳಿದರು. ಸರಿ ಹಾಗಾದರೆ ಚಪ್ಪಲಿ ಎಂಬುದು ಅದು ಕೇವಲ ಅಲ್ಲ, ಅದು ನ್ ಮ್ಮ ಕಾಲಿಗೆ ಮುಳ್ಳುಗಳಿಂದ, ಹೇಸಿಗೆಯಿಂದ, ಕೊಳಚೆಯಿಂದ ಮತ್ತು ಸುಡು ಬಿಸಿಲಿನಿಂದ ಅದು ನಮಗೆ ರಕ್ಷಣೆ ಕೊಡುತ್ತದೆ ಅದಕ್ಕೆ ಅದನ್ನು ಪಾದರಕ್ಷೆಗಳು ಎಂದು ಕರೆಯುತ್ತಾರೆ. ಇದನ್ನ ನಿಮ್ಮ ಮಾತಿನ ಪ್ರಕಾರ ಹೋದರೆ ಇಸ್ಲಾಂ ಧರ್ಮದ ಧಾರ್ಮಿಕ ಸ್ಥಳದಲ್ಲಿ ನಿಮ್ಮ ಮನೆಯ ದೇವರಾದ ಚಪ್ಪಲಿಗಳನ್ನು ಹಾಕಿಕೊಂಡು ಒಳಗೆ ಹೋಗಲು ಅನುಮತಿ ಇದೆಯಾ? ಇಲ್ಲ ಆ ಧೈರ್ಯ ನಿಮಗೆ ಇದೆಯಾ? ನಿಮಗೆ ನೀವೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು.

ಚಪ್ಪಲಿ ಕುರಿತು ನಿಮ್ಮ ಈ ಹೇಳಿಕೆ ಸಮಾಜದ ಬಹುಪಾಲು ಜನರ ಮನಸ್ಸಿಗೆ ನೋವುಂಟುಮಾಡಿದೆ. ಅದನ್ನು "ಸ್ವಾತಂತ್ರ್ಯ" ಎಂದು ಮಾತ್ರ ಸಮರ್ಥಿಸಬಹುದೇ? ಸ್ವಾತಂತ್ರ್ಯಕ್ಕೆ ಮಿತಿ ಇಲ್ಲವೆ?ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಆದರೆ ಅದಕ್ಕೂ ಒಂದು ಸಾಮಾಜಿಕ



ಹೊಣೆಗಾರಿಕೆ ಇದೆ ಅಲ್ಲವೆ. ನಮ್ಮ ಮಾತುಗಳು, ನಮ್ಮ ನಡೆಗಳು ಇವು ಸಮಾಜದಲ್ಲಿ ಯಾವ ಪರಿಣಾಮ ಉಂಟುಮಾಡುತ್ತವೆ ಎಂಬುದನ್ನು ಗಮನಿಸಬೇಕು.

ಸಂಸ್ಕೃತಿಯ ಕುರಿತು ಮಾತಾಡುವಾಗ

ಈ ಹಿಂದೆ ನಿಮ್ಮ ಭಾಷಣದಲ್ಲಿ ಕನ್ನಡಮ್ಮನ ಮೇಲೆ ಭಾರಿ ವಿವಾದಾತ್ಮಕ ಹೇಳಿಕೆ ನೀಡಿದ್ದಿರಿ. ನಮ್ಮ ಕನ್ನಡನಾಡಿನಲ್ಲಿ "ಭುವನೇಶ್ವರಿ ತಾಯಿ" ಎಂಬುದು ಕೇವಲ ಒಂದು ಪ್ರತಿಮೆ ಅಲ್ಲ. ಅದು ಒಂದು ಸಂಸ್ಕೃತಿಯ ಸಂಕೇತ. ಅರಿಶಿಣ, ಕುಂಕುಮ, ಪೂಜೆ ಇವುಗಳು ಶತಮಾನಗಳಿಂದ ಬಂದಿರುವ ನಮ್ಮ ಆಚರಣೆಗಳು. ಮರಳು ಗಾಡಿನ ಧರ್ಮದಲ್ಲಿ ಈ ವಿಶೇಷತೆಗಳು ಕಂಡು ಬರುವುದಿಲ್ಲ. ಆ ಧರ್ಮದವರೆ ಆಗಿರುವ ಭಾನು ಮುಷ್ತಾಕ್ ರವರು ಒಮ್ಮೆ ಯೋಚಿಸಿ ಭಾಷಣ ಮಾಡಬೇಕಿತ್ತು. ಅದೇ ಮರಳುಗಾಡಿನ ಧರ್ಮದವರಾದ ನಿಸಾರ್ ಅಹ್ಮದ್ ಅವರ ನಿತ್ಯೋತ್ಸವ ತಾಯಿ ನಿನಗೆ ನಿತ್ಯೋತ್ಸವದ ಕವನದಲ್ಲಿ ಕರ್ನಾಟಕದ ಸೌಂದರ್ಯ, ಸಂಸ್ಕೃತಿ ಮತ್ತು ತಾಯಿ ಭೂಮಿಯ ಮಹತ್ವವನ್ನು ಕೊಂಡಾಡುತ್ತದೆ. ಈ ವಿಚಾರದಲ್ಲಿ ನಿಸಾರ್ ಅಹಮದ್ ಅವರು ಕನ್ನಡಿಗರ ಮನಸ್ಸನ್ನು ಗೆಲ್ಲುತ್ತಾರೆ. ಇವುಗಳನ್ನು ಒಪ್ಪಿಕೊಳ್ಳುವುದು ಅಥವಾ ಒಪ್ಪಿಕೊಳ್ಳದಿರುವುದು ಪ್ರತಿಯೊಬ್ಬರ ವೈಯಕ್ತಿಕ ಆಯ್ಕೆ. ಆದರೆ ಒಪ್ಪಿಕೊಳ್ಳದಿದ್ದರೆ, ಅದನ್ನು ಗೌರವದಿಂದ ಬಿಟ್ಟುಬಿಡಬಹುದು. ಸಾರ್ವಜನಿಕವಾಗಿ ಈ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ.

ದ್ವಂದ್ವ ನಿಲುವು

ಇಲ್ಲಿ ಮುಖ್ಯ ಪ್ರಶ್ನೆ ಏನು ಅಂದರೆ, ಭುವನೇಶ್ವರಿ ತಾಯಿಯನ್ನು ವಿರೋಧಿಸುವವರು ಹೇಗೆ ಚಾಮುಂಡೇಶ್ವರಿ ದೇವಸ್ಥಾನದ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ?ಚಾಮುಂಡೇಶ್ವರಿ ದೇವಿ ಕೂಡ ಒಂದು ಭಕ್ತಿ ಮತ್ತು ಸಂಪ್ರದಾಯದ ಪ್ರತೀಕವೇ. ಬಹುಪಾಲು ಕನ್ನಡಿಗರು ಈ ವಿಷಯದಲ್ಲಿ ನಿಮ್ಮನ್ನು ವಿರೋಧ ಮಾಡಿದವರೆ. ಅದನ್ನು ಅರ್ಥ ಮಾಡಿಕೊಳ್ಳದೆ ದಸರಾ ಹಬ್ಬದಲ್ಲಿ ಚಾಮುಂಡೇಶ್ವರಿಗೆ ಕೈಮುಗಿದು ಪುಷ್ಪ ನಮನ ಮಾಡಿದ್ರಿ, ಇದು ನಿಮಗೆ ಶೋಭೆ ತಂದುಕೊಟ್ಟಿದೆಯಾ? ಅಂತ ನಿಮ್ಮನ್ನ ನೀವೆ ಪ್ರಶ್ನೆ ಮಾಡಿಕೊಳ್ಳಿ ಒಮ್ಮೆ. ಅದೇ ನಿಸಾರ್ ಅಹಮದ್ ಅವರು ಕೂಡ ಒಮ್ಮೆ ದಸರಾ ಹಬ್ಬದಲ್ಲಿ ಚಾಮುಂಡೇಶ್ವರಿಗೆ ಪುಷ್ಪ ನಮನ ಮಾಡಿದ್ರು ಇದಕ್ಕೆ ಯಾರು ಕೂಡ ವಿರೋಧ ಮಾಡಿರಲಿಲ್ಲ. ಯಾಕೆ? ಅನ್ನೋದು ನಿಮಗೆ ನೀವೆ ಪ್ರಶ್ನೆ ಮಾಡಿಕೊಂಡರೆ ಉತ್ತರ ಸುಲಭವಾಗಿ ಸಿಗುತ್ತದೆ. ಒಂದನ್ನು "ಮೂಢನಂಬಿಕೆ" ಎಂದು ಕರೆಯುವುದು ಮತ್ತೊಂದರಲ್ಲಿ ಭಾಗವಹಿಸುವುದು.

ಕೊನೆಯ ಮಾತು

ಈ ಎಲ್ಲಾ ಘಟನೆಗಳನ್ನು ನೋಡಿದಾಗ ಒಂದು ಪ್ರಶ್ನೆ ಉದ್ಭವಿಸುತ್ತದೆ. ನಿಮ್ಮ ನಿಜವಾದ ನಿಲುವು ಏನು? ಅಥವಾ ಸಂದರ್ಭಕ್ಕೆ ತಕ್ಕಂತೆ ಬದಲಾಗುವ ನಿಲುವೇ? ಸಂಸ್ಕೃತಿಯನ್ನು ವಿರೋಧಿಸುವುದು ತಪ್ಪಲ್ಲ. ಆದ್ರೆ ಅದರಲ್ಲಿ ಸ್ಥಿರತೆ ಮತ್ತು ಸ್ಪಷ್ಟತೆ ಇರಬೇಕು. ಇಲ್ಲದಿದ್ದರೆ ಅದು ದ್ವಂದ್ವವಾಗಿ ಕಾಣಬಹುದು ಅಥವಾ ಸ್ವಾರ್ಥದಂತೆ ಭಾಸವಾಗಬಹುದು

ಸಾರಾಂಶ

ನಮ್ಮ ಸಮಾಜದಲ್ಲಿ ಭಿನ್ನಾಭಿಪ್ರಾಯಗಳು ಸಹಜ. ಆದರೆ ಗೌರವ ಕಾಪಾಡಿಕೊಂಡು ಮಾತನಾಡುವುದು, ಸ್ಪಷ್ಟ ಮತ್ತು ಸ್ಥಿರ ನಿಲುವು ಇರುವುದು ಇವುಗಳೇ ನಿಜವಾದ ಬೌದ್ಧಿಕತೆ.

ನಿಲುವು ಎಂದರೆ ಮಾತಲ್ಲ,
ಮನಸ್ಸಿನ ಅಕ್ಕಸಾಲಿಗದ ಕನ್ನಡಿಕನ್ನಡಿ.
ಒಮ್ಮೆ ಹೇಳಿದ ಮಾತು
ಮತ್ತೊಮ್ಮೆ ಬದಲಾಗಿದ್ರೆ ಅದು ಸತ್ಯವೇ?
ಸಂಸ್ಕೃತಿ ಎನ್ನುವುದು ಮಣ್ಣು ಅಲ್ಲ,
ಅದು ನಮ್ಮ ಉಸಿರು, ನಮ್ಮ ಗುರುತು.
ಅದನ್ನು ತಳ್ಳಿ ಹಾಕುವ ಕೈಗಿಂತ,
ಗೌರವಿಸುವ ಹೃದಯವೇ ದೊಡ್ಡದು.
ಒಂದನ್ನು ನಿಂದಿಸಿ, ಇನ್ನೊಂದನ್ನು ನಮಿಸಿದರೆ,
ಅದು ಭಕ್ತಿ ಅಲ್ಲ ಪ್ರಶ್ನೆಯ ನೆರಳು!
ನಿಲುವು ಒಂದೇ ದಾರಿಯಲ್ಲಿ ನಡೆದರೆ ಮಾತ್ರ,
ಅದು ನಿಜದ ಬೆಳಕು ಕಾಣಿಸುತ್ತದೆ.
ಸ್ವಾತಂತ್ರ್ಯ ಎಂದರೆ ಏನು?
ಇತರರ ಹೃದಯಕ್ಕೆ ನೀವು ನೀಡುವ ತೀರ್ಪೇ?
ಅಥವಾ ಎಲ್ಲರನ್ನೂ ಸೇರಿಸಿ ನಿಲ್ಲಿಸುವ
ಒಂದು ಮೌನದ ಜವಾಬ್ದಾರಿಯೇ?
ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಒಂದೇ:
ನಮ್ಮ ಮಾತುಗಳು ಸೇತುವೆಯಾ?
ಅಥವಾ ಗೋಡೆಯಾ?

–ಅನುರಾಗ್ ಭೀಮಸಂದ್ರ

ಜೆಬಿಡಿಎ; ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಿ, ಯೋಜನೆ ಪರ ರೈತರ ಒತ್ತಾಯ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ಜೆಬಿಡಿಎ ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸುವಂತೆ ಹಾಗೂ ರೆಡ್‌ಝೋನ್ (ಕೆಂಪುವಲಯ) ತೆರವುಗೊಳಿಸುವಂತೆ ಆಗ್ರಹಿಸಿ ಶನಿವಾರ ಬಿಡದಿ ಇಂಟಿಗ್ರೇಟೆಡ್ ಸಿಟಿ ಯೋಜನೆ ಪರ ಇರುವ ರೈತರು, ಮುಖಂಡರು ಹಾಗೂ ಸ್ಥಳೀಯರು ಭೈರಮಂಗಲ ಹಾರೋಹಳ್ಳಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಬಿಡದಿಯ ಬೈರಮಂಗಲ ವೃತ್ತದ ಬಳಿ ಯೋಜನೆ ಪರವಿರುವ ರೈತರ ಮುಖಂಡರು ಶನಿವಾರ ಸುದ್ದಿಗೋಷ್ಠಿ ನಡೆಸಿ ಶೀಘ್ರವಾಗಿ ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಬೇಕು ಎಂದು ಒತ್ತಾಯಿಸಿದರು. ಬಳಿಕ ಸ್ಮಾರ್ಟ್ ಸಿಟಿ ಯೋಜನೆ ವಿಷಯಕ್ಕೆ ತಾರ್ಕಿಕ ಅಂತ್ಯ ನೀಡಬೇಕೆಂದು ಆಗ್ರಹಿಸಿ ಕೆಲಕಾಲ ರಸ್ತೆ ತಡೆ ನಡೆಸಿದರು.

ಈ ವೇಳೆ ರೈತ ಮುಖಂಡ ಹೆಚ್.ಸಿ.ರಾಜಣ್ಣ ಮಾತನಾಡಿ, ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ಬಿಡದಿ ಸ್ಮಾರ್ಟ್ ಸಿಟಿಯನ್ನು ಘೋಷಣೆ ಮಾಡಿದ್ದರು, ಈ ಯೋಜನೆಯು ನನ್ನ ಕನಸಿನ ಕೂಸು ಎಂದಿದ್ದರು. ಜೊತೆಗೆ, ಬಿಡದಿ ಸ್ಮಾರ್ಟ್ ಸಿಟಿ ಯೋಜನೆ ಸಂಬಂಧ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವ ಪ್ರದೇಶವನ್ನು ರೆಡ್‌ಝೋನ್ (ಕೆಂಪು ವಲಯ) ಘೋಷಣೆ ಮಾಡಿದ್ದರು. ಹಾಗಾಗಿ



ಕಳೆದ 20 ವರ್ಷಗಳಿಂದ ಈ ಭಾಗದ ರೈತರು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ಇರುವ ಸಮಸ್ಯೆಯನ್ನು ರಾಜ್ಯ ಸರ್ಕಾರ ಶೀಘ್ರವೇ ಬಗೆಹರಿಸಿಕೊಡಬೇಕು. ಜೊತೆಗೆ, ಕೆಂಪು ವಲಯವನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು. 2007ರಿಂದ ಈ ಪ್ರದೇಶದಲ್ಲಿ ರೈತರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಜಮೀನು ಮಾರಾಟ, ಖರೀಧಿ ಸೇರಿದಂತೆ ಸಾಕಷ್ಟು ತಲೆನೋವಾಗಿ ಪರಿಣಮಿಸಿದೆ. ಈ ಯೋಜನೆ ಸಂಬಂಧ ರಾಜಕಾರಣಿಗಳು ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳಲು ಬರುತ್ತಿದ್ದಾರೆ. ಇದರಿಂದಾಗಿ ರೈತರಿಗೆ ಮತ್ತಷ್ಟು ಸಂಕಷ್ಟ ಎದುರಾಗಿದೆ. ಕಳೆದ ವಾರ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಮಾಜಿ ಶಾಸಕರು ಆಗಮಿಸಿ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದರು ಎಂದರು.

ನಮ್ಮ ಅಭಿಪ್ರಾಯ ಕೇಳಲಿಲ್ಲ : ಯೋಜನೆ ಪೂರ್ವ ಪರ ತಿಳಿದುಕೊಳ್ಳುವ ಸಲುವಾಗಿ ಆಗಮಿಸಿದ್ದ ಕುಮಾರಸ್ವಾಮಿ ಅವರು ಯೋಜನೆ ಪರವಾಗಿದ್ದ ರೈತರ ಕೂಗನ್ನು ಕೇಳಬೇಕಿತ್ತು. ಸ್ಥಳಕ್ಕೆ ಬಂದವರು ನಮ್ಮ ಕಷ್ಟಸುಖವನ್ನು ಕೇಳದೆ ತೆರಳಿದರು, ದಯವಿಟ್ಟು "ಮಾಜಿ ಮುಖ್ಯಮಂತ್ರಿಗಳೇ ನಾವು ಪ್ರತಿಭಟನೆ ನಡೆಸುತ್ತಿರುವ ಸ್ಥಳಕ್ಕೆ ಆಗಮಿಸಿ" ನಮ್ಮ ಕಷ್ಟಸುಖವನ್ನು ಕೇಳಿ ಎಂದ ಅವರು ಹೆಚ್‌ಡಿಕೆ ಈಗ ಕೇಂದ್ರ ಸಚಿವರಾಗಿದ್ದಾರೆ. ಕೇಂದ್ರಸರ್ಕಾರದಲ್ಲಿ ಪ್ರಮುಖ ಖಾತೆ ಹೊಂದಿರುವ ಅವರಿಗೆ ಅವರದ್ದೇ ಆದಂತಹ ಶಕ್ತಿ ಇದೆ ಎಂದರು.

ನಮ್ಮ ಕೂಗು ಕೇಳಿ ಸ್ವಾಮಿ : ಕಳೆದ ವಾರ ಬೈರಮಂಗಲ ಭೇಟಿಯ ವೇಳೆ ಹೆಚ್‌ಡಿಕೆ ನಮ್ಮ ಕೂಗು ಕೇಳಲಿಲ್ಲ. ಯೋಜನೆ ಪರ ರೈತರ ಮನವಿ ಆಲಿಸುವ ಬದಲು ಪೊಲೀಸರ ಭದ್ರತೆಯಲ್ಲಿ ತೆರಳಿದರು. 2006ರಲ್ಲಿ ಈ ಯೋಜನೆ ಘೋಷಣೆ ಮಾಡಿದ್ದ ಕುಮಾರಸ್ವಾಮಿ ಅವರು ಅಂದು ಸ್ಥಳೀಯ ರೈತರ ಅಭಿಪ್ರಾಯ ಸಂಗ್ರಹಿಸಿದ್ದರೇ?. ಸಿಎಂ ಡಿ.ಕೆ.ಶಿವಕುಮಾರ್ ಅವರು ಯೋಜನೆ ಕುರಿತು ಚರ್ಚಿಸಲು ವಿಧಾನಸೌಧಕ್ಕೆ ಆಗಮಿಸುವಂತೆ ಕರೆದರೂ ಅವರು ಹೋಗಲಿಲ್ಲ. ಬೈರಮಂಗಲ ಭೇಟಿ ವೇಳೆ ನಮ್ಮನ್ನು ಕರೆದು ಮಾತನಾಡಿಸಿ ಕಷ್ಟ ಸುಖವನ್ನು ವಿಚಾರಿಸದ ಅವರಿಗೆ ಈ ಯೋಜನೆ ಬಗ್ಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಮುಖಂಡ ಸಿದ್ದರಾಜು ಮಾತನಾಡಿ, ಕುಮಾರಸ್ವಾಮಿ ಅವರು ಬಿಡದಿ ಯೋಜನೆ ಘೋಷಣೆ ಮಾಡಿ 22 ವರ್ಷ ಕಳೆಯುತ್ತಿದೆ. ಈ ಭಾಗದಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ, ಯಾವ ಸರ್ಕಾರಗಳು ರೆಡ್ ಝೋನ್ ತೆರವು ಮಾಡಿ ನಮ್ಮ ಜಮೀನು ಸಮಸ್ಯೆ ಬಗೆಹರಿಸಲಿಲ್ಲ. ಬೈರಮಂಗಲ ಕೆರೆಯ ಕಲುಷಿತ ನೀರನ್ನು ಬಳಸಿಕೊಂಡು ವ್ಯವಸಾಯ ಮಾಡುತ್ತಿದ್ದೇವೆ. ಸಾಂಕ್ರಾಮಿಕ ರೋಗ ಹರಡುವ ಭೀತಿ ಇದ್ದು, ರಾತ್ರಿಯಾದರೆ, ಸೊಳ್ಳೆಯ ಕಾಟ ಹೆಚ್ಚಾಗಿದೆ. ಈ ಬಗ್ಗೆ ಕೇಂದ್ರ ಸಚಿವರಿಗೆ ಮನವರಿಕೆ ಮಾಡಿಕೊಡುವ ಸಲುವಾಗಿ ನಮ್ಮ ಪ್ರತಿಭಟನಾ ಸ್ಥಳಕ್ಕೆ ಬರುವಂತೆ ಮನವಿ ಮಾಡಿದ್ದರು ಬರಲಿಲ್ಲ. ಇದೀಗ ಡಿಕೆಶಿ ನೇತೃತ್ವದ ಈಗಿನ ಸರ್ಕಾರ ನಮಗೆ ನ್ಯಾಯಯುತವಾದ ಪರಿಹಾರ ನೀಡಲು ಒಪ್ಪಿದೆ. ಸರ್ಕಾರದ ನಿರ್ಧಾರವನ್ನ ನಾವು ಗೌರವಿಸುತ್ತೇವೆ. ಈಗ ಯೋಜನೆ ವಿರುದ್ಧವಾಗಿ ಪ್ರತಿಭಟನೆ ಮಾಡುತ್ತಿರುವ ಕೆಲ ರೈತರು ಹಿಂದೆ ಯೋಜನೆಯನ್ನ ಸ್ವಾಗತಿಸಿದ್ದರು. ಈಗ ರಾಜಕೀಯ ಕಾರಣಕ್ಕಾಗಿ ವಿರೋಧ ಮಾಡುತ್ತಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಜಯಚಂದ್ರ, ಶೇಖರ್, ಶಂಕರ್ ರೆಡ್ಡಿ, ಭರತ್, ಎಂ.ವಿ ಮಂಜುನಾಥ್, ಶಿವರಾಮ್, ಮಹೇಶ್, ಮಂಜುನಾಥ್, ವಿಶ್ವನಾಥ್, ವಿನಯ್ ಕುಮಾರ್ ಸೇರಿದಂತೆ ಹಲವರಿದ್ದರು.

ಜೀವನದಲ್ಲಿ ಆರೋಗ್ಯವೇ ಸಂಪತ್ತು : ಬಿಡದಿ ವಿವಿಧೋದ್ದೇಶ ಸಹಕಾರಿ ಸಂಘದಿಂದ ಬೃಹತ್ ಆರೋಗ್ಯ ಶಿಬಿರ



ರಾಮನಗರ: ಮನುಷ್ಯನ ಜೀವನದಲ್ಲಿ ಆರೋಗ್ಯಕ್ಕಿಂತ ದೊಡ್ಡ ಸಂಪತ್ತು ಮತ್ತೊಂದಿಲ್ಲ. ಹೀಗಾಗಿ ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಬಿಡದಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಸಹಕಾರಿ ಸಂಘದ ಅಧ್ಯಕ್ಷ ಜೀವನ್ ಬಾಬು ತಿಳಿಸಿದರು.

ಬಿಡದಿಯ ರೈತ ಸಮುದಾಯ ಭವನದಲ್ಲಿ ಶನಿವಾರ ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯ 5 ವರ್ಷ ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಸಹಕಾರ ಸಪ್ತಾಹ ಆಚರಣೆ–2026 ಹಾಗೂ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿತ್ತು. ಬಿಡದಿ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಸಹಕಾರ ಸಂಘ ನಿಯಮಿತ, ಬಿ.ಡಿ.ಸಿ.ಸಿ. ಬ್ಯಾಂಕ್, ರೋಟರಿ ಬಿಡದಿ ಸೆಂಟ್ರಲ್ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಬೃಹತ್ ಆರೋಗ್ಯ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು

ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಜನರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಉತ್ತಮ ವೇದಿಕೆಯಾಗಿದೆ. ಇಂದಿನ ದಿನಮಾನದಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಗೊತ್ತಿಲ್ಲದ ಕಾಯಿಲೆಗಳ ಪತ್ತೆಗೆ ಸಾರ್ವಜನಿಕ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಸಹಕಾರಿಯಾಗಿದ್ದು ಇಂತಹ ಶಿಬಿರಗಳನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಡಾ.ಚಂದ್ರಮ್ಮ ದಯಾನಂದ ಸಾಗರ್ ಆಸ್ಪತ್ರೆ ಹಾರೋಹಳ್ಳಿ, ಶಂಕರ್ ಕಣ್ಣಿನ ಆಸ್ಪತ್ರೆ ಹಾಗೂ ತಜ್ಞ ವೈದ್ಯರುಗಳು ಉಚಿತ ಆರೋಗ್ಯ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಿದ್ದರು. ಬಿಡದಿ ಸುತ್ತಮುತ್ತಲಿನ ಗ್ರಾಮಸ್ಥರಿಗೆ ರಕ್ತದೊತ್ತಡ, ಮಧುಮೇಹ, ಇಸಿಜಿ, ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆ ಹಾಗೂ ಇನ್ನಿತರ ತಪಾಸಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಬಿಡದಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಸಹಕಾರಿ ಸಂಘದ ಉಪಾಧ್ಯಕ್ಷ ಕೆ.ಪಿ.ಬಾಲಕೃಷ್ಣ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಂ.ಕಿರಣ್, ರೋಟರಿ ಬಿಡದಿ ಸೆಂಟ್ರಲ್ ಅಧ್ಯಕ್ಷ ಜಿ.ಕೃಷ್ಣ, ಕಾರ್ಯದರ್ಶಿ ಕೆ.ಎಸ್. ರಮೇಶ್, ರೋಟರಿಯನ್ ಆರ್. ಮಲ್ಲೇಶ್, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಯೋಗಾನಂದ್, ಬಿಡಿಸಿಸಿ ಬ್ಯಾಂಕ್ ಬಿಡದಿ ಶಾಖೆಯ ಶಾಖಾ ವ್ಯವಸ್ಥಾಪಕಿ ನಾಗರತ್ನ ಪಿ., ಮೇಲ್ವಿಚಾರಕ ವೆಂಕಟೇಶ್, ಶ್ರೀದೇವಿ, ವೈದ್ಯ ಡಾ. ಲೋಹಿತ್ ಮತ್ತು ಸಿಬ್ಬಂದಿ ವರ್ಗ, ಬಿಡದಿ ರೈತ ಸೇವಾ ಸಹಕಾರ ಸಂಘದ ಸಿಬ್ಬಂದಿ ವರ್ಗ, ಇಫ್ಕೋ ರಸಗೊಬ್ಬರ ಕಂಪನಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ದೇಶದ ಆರ್ಥಿಕತೆಯ ಅಭಿವೃದ್ಧಿಗೆ ಸ್ವಸಹಾಯ ಗುಂಪುಗಳು

ಮಹಿಳಾ ಸಬಲೀಕರಣ



ಸೂರ್ಯಪ್ರಗತಿನ್ಯೂಸ್.ಕಾಂ

ಆನೇಕಲ್ : ದೇಶದ ಆರ್ಥಿಕತೆಯ ಅಭಿವೃದ್ಧಿಗೆ ಹೆಚ್ಚು ಕೊಡುಗೆ ನೀಡುತ್ತಿದ್ದಾರೆ. ಸ್ವಸಹಾಯ ಗುಂಪುಗಳು ಮಹಿಳಾ ಸಬಲೀಕರಣ ಮತ್ತು ಮಹಿಳಾ ಸಂಘಟನೆಗೆ ಪೂರಕವಾಗಿದೆ ಎಂದು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಭಾರ್ಗವ್ ರೆಡ್ಡಿ ತಿಳಿಸಿದರು.

ಅವರು ತಾಲ್ಲೂಕಿನ ಮಾಯಸಂದ್ರದಲ್ಲಿ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ, ಬಿಡಿಸಿಸಿ, ಮಾಯಸಂದ್ರ ಮತ್ತು ಚಿಕ್ಕಹೊಸಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಮಹಿಳಾ ಸಬಲೀಕರಣ ಸ್ವಸಹಾಯ ಗುಂಪುಗಳ ಪಾತ್ರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಿಡಿಸಿಸಿ ಬ್ಯಾಂಕ್ ವತಿಯಿಂದ ಸ್ತ್ರೀಶಕ್ತಿ ಸಂಘಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು ಸಾಲವನ್ನು ಪಡೆದ ಉದ್ದೇಶಕ್ಕಾಗಿ ಬಳಸಿ ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಮಾಯಸಂದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಿನ್ನಪ್ಪ ಮಾತನಾಡಿ ಸಾಲ, ಸಬ್ಸಿಡಿ ಸೇರಿದಂತೆ ವಿವಿಧ ಸೌಲಭ್ಯಗಳಿದ್ದು ಇವುಗಳನ್ನು ಬಳಸಿಕೊಂಡು ಸಬಲರಾಗಬೇಕು. ಈ ನಿಟ್ಟಿನಲ್ಲಿ ತರಬೇತಿ ಮಾರ್ಗದರ್ಶನ ಸೌಲಭ್ಯವನ್ನು ಸಹಕಾರ ಸಂಘದ ಮೂಲಕ ನೀಡಲಾಗುವುದು. ಸ್ವಸಹಾಯ ಸಂಘಗಳಲ್ಲಿ ಉತ್ತಮ ಸಾಧನೆ ಮಾಡಿದವರ ಸಂದರ್ಶನ ಮಾಡಿ ಆರ್ಥಿಕ ಕ್ರೋಢೀಕರಣ ಸೇರಿದಂತೆ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಲಾಗುವುದು ಎಂದರು

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಬಿ.ಸಿ.ಶಿವಲಿಂಗೇಗೌಡ, ನಿರ್ದೇಶಕ ಬಿದರಗೆರೆ ಮೂರ್ತಿ, ಕಾರ್ಯನಿರ್ವಹಣಾಧಿಕಾರಿ ಸವಿತಾ ಬಿಸನಾಳು, ಸಹಕಾರ ಅಭಿವೃದ್ಧಿ ಅಧಿಕಾರಿ ಬಿ.ಕೆ.ವಿದ್ಯಾರಾಣಿ, ಮಾಯಸಂದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಮಲ್ಲೇಶ್ ರೆಡ್ಡಿ, ನಿರ್ದೇಶಕರಾದ ಗೆರಟಿಗನಬೆಲೆ ರಾಮಕೃಷ್ಣ, ಶಶೀಕಲಾ, ನವ್ಯಾ, ಕೆಂಪಣ್ಣ ಇದ್ದರು.

ರೈತರ ಮೇಲಿನ ದೌರ್ಜನ್ಯ ಮತ್ತು ಭೂಸ್ವಾಧೀನ ವಿರೋಧಿಸಿ

ಕುಮಾರಸ್ವಾಮಿ ಮತ್ತು ನಿಖಿಲ್ ಅವರ ನೇತೃತ್ವದಲ್ಲಿ ಮುತ್ತಾನಲ್ಲೂರಿನಲ್ಲಿ ಬೃಹತ್



ಚಂದಾಪುರ (ಆನೇಕಲ್) : ರೈತರ ಮೇಲಿನ ದೌರ್ಜನ್ಯ ಮತ್ತು ಭೂಸ್ವಾಧೀನ ವಿರೋಧಿಸಿ ಜುಲೈ 26ರಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ನಿಖಿಲ್ ಅವರ ನೇತೃತ್ವದಲ್ಲಿ ಮುತ್ತಾನಲ್ಲೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಜೆಡಿಎಸ್ ಪಕ್ಷದ ರಾಜ್ಯ ಉಪಾಧ್ಯಕ್ಷ ಗೊಟ್ಟಿಗೆರೆ ಮಂಜುನಾಥ್ ತಿಳಿಸಿದರು.

ಅವರು ತಾಲ್ಲೂಕಿನ ಚಂದಾಪುರದಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ಶನಿವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸರ್ಜಾಪುರ ಹೋಬಳಿಯಲ್ಲಿ ಮಾರುಕಟ್ಟೆ ಬೆಲೆ ಎಕರೆ 10–15 ಕೋಟಿಯಿದೆ, ಆದರೆ ಸರ್ಕಾರ 2.5ಕೋಟಿ ಪರಿಹಾರ ನೀಡುವುದಾಗಿ ಹೇಳುತ್ತಿದೆ. ಮನೆಯಲ್ಲಿ ಐದಾರು ಮಕ್ಕಳಿದ್ದು ಭಾಗವಿಟ್ಟರೆ ಯಾರಿಗೂ ಸರಿಯಾದ ಹಣ ದೊರೆಯುವುದಿಲ್ಲ. ಹಾಗಾಗಿ ಭೂಮಿಯ ಮಕ್ಕಳನ್ನು ಕೃಷಿಗೆ ಬಿಟ್ಟು ಬಿಡಿ. ಆನೇಕಲ್ ತಾಲ್ಲೂಕಿನಲ್ಲಿ ಐದು ಕೈಗಾರಿಕ ಪ್ರದೇಶಳಿವೆ ಇಲ್ಲಿಯೇ ಹಲವಾರು ಸಮಸ್ಯೆಗಳಿವೆ ಮತ್ತು ನೂರಾರು ಎಕರೆ ಭೂಮಿ ಖಾಲಿಯಿದೆ. ಇಲ್ಲಿಯೇ ಕೈಗಾರಿಕೆ ಮಾಡಿಕೊಳ್ಳಲು ಸರ್ಕಾರ ತನ್ನ ಕ್ರಮವನ್ನು ಮರುಪರಿಶೀಲನೆ ನಡೆಸಬೇಕು ಎಂದರು.

ರೈತರ ಕೃಷಿ ಭೂಮಿಯನ್ನು ಕಿತ್ತುಕೊಂಡರೆ ಸಣ್ಣ ಮತ್ತು ಮಧ್ಯಮ ರೈತರ ಪರಿಸ್ಥಿತಿ ಡೋಲಾಯಮಾನವಾಗುತ್ತದೆ. ಸರ್ಜಾಪುರ ಭಾಗದ ರೈತರ ಸಮಸ್ಯೆಗಳ ಬಗ್ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಸಂಪೂರ್ಣ ಮಾಹಿತಿ ಪಡೆದಿದ್ದು ಅವರ ನೇತೃತ್ವದಲ್ಲಿಯೇ ಹೋರಾಟದ ರೂಪುರೇಷುಗಳನ್ನು ಸಿದ್ಧಪಡಿಸಲಾಗುವುದು ಎಂದು ಮುಖಂಡ ಕೆ.ಪಿ.ರಾಜು ತಿಳಿಸಿದರು.ಜೆಡಿಎಸ್ ರಾಜ್ಯ ಪರಿಶಿಷ್ಟ ಜಾತಿ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಪಟಾಪಟ್ ರವಿ, ತಾಲ್ಲೂಕು ಅಧ್ಯಕ್ಷ ದೇವೇಗೌಡ, ಸೊಪ್ಪಹಳ್ಳಿ ಸತೀಶ್ ,ಸೋಲೂರು ಮಹೇಶ್ , ಕೆ.ಪಿ.ಆರ್ ಮದೇಶ್, ಇದ್ದರು.

"ಕನಕಪುರ ದೇಗುಲ ಮಠಕ್ಕೆ ಸಂಸದರಾದ ಡಾ. ಸಿ. ಎನ್. ಮಂಜುನಾಥ್ ಭೇಟಿ"

ಸೂರ್ಯಪ್ರಗತಿನ್ಯೂಸ್.ಕಾಂ

ಕನಕಪುರದ ಪವಿತ್ರದೇಗುಲ ಮಠಕ್ಕೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಸಂಸದರಾದ ಪದ್ಮಶ್ರೀ ಡಾ. ಸಿ. ಎನ್. ಮಂಜುನಾಥ್ ಅವರು ಭೇಟಿ ನೀಡಿ, ಲಿಂಗೈಕ್ಯ ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ಮುಮ್ಮಡಿ ನಿರ್ವಾಣ ಮಹಾಸ್ವಾಮೀಜಿಗಳವರ ಪವಿತ್ರ ಪುಣ್ಯ ಗದ್ದುಗೆಯ ದರ್ಶನ ಪಡೆದು ಭಕ್ತಿಪೂರ್ವಕ ನಮನ ಸಲ್ಲಿಸಿದರು. ಬಳಿಕ ಮಠದ ಕಿರಿಯ ಶ್ರೀಗಳ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದರು, ದೇಗುಲ ಮಠವು ಅನ್ನ, ಅಕ್ಷರ ಹಾಗೂ ತ್ರಿವಿಧ ದಾಸೋಹಗಳ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತಾ ಸಮಾಜಮುಖಿ ಸೇವೆಯ ಶ್ರೇಷ್ಠ ಪರಂಪರೆಯನ್ನು ಉಳಿಸಿಕೊಂಡಿದೆ. ಹಿರಿಯ ಶ್ರೀಗಳ ತ್ಯಾಗ, ತಪಸ್ಸು, ಸೇವಾಭಾವ ಮತ್ತು ಧರ್ಮನಿಷ್ಠೆ ಇಂದಿಗೂ ಸಾವಿರಾರು ಭಕ್ತರಿಗೆ ಸ್ಫೂರ್ತಿಯಾಗಿದೆ. ಅವರು ತೋರಿದ ಸೇವೆಯ ದಾರಿಯಲ್ಲೇ ಮಠ ಮುನ್ನಡೆಯುತ್ತಿರುವುದು ಅತ್ಯಂತ ಶ್ಲಾಘನೀಯ. ಇಂತಹ ಧಾರ್ಮಿಕ ಮತ್ತು ಸಾಮಾಜಿಕ ಸೇವಾ ಕೇಂದ್ರಗಳು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾದ ಜಗನ್ನಾಥ್ ಗೌಡ, ಕನಕಪುರ ಜೆಡಿಎಸ್ ಮಹಿಳಾ ಮೋರ್ಚಾದ ಮಾಜಿ ಅಧ್ಯಕ್ಷರಾದ ಶ್ರೀಮತಿ ಶೋಭಾ, ಕನಕಪುರ ಬಿಜೆಪಿ ಮಾಜಿ ಅಧ್ಯಕ್ಷರಾದ ಶ್ರೀ ಕೋಟೆ ಮಂಜುನಾಥ್, ಜೆಡಿಎಸ್ ಮುಖಂಡರಾದ ನಲ್ಲಳ್ಳಿ ಶಿವಕುಮಾರ್ ಹಾಗೂ ಅನೇಕ ಜನಪ್ರತಿನಿಧಿಗಳು, ಮುಖಂಡರು, ಗಣ್ಯರು ಮತ್ತು ಭಕ್ತಾದಿಗಳು ಉಪಸ್ಥಿತರಿದ್ದರು.

6ರಂದು ಡಾ. ಬಾಬು ಜಗಜೀವನರಾಂ ರವರ 40ನೇ ಪುಣ್ಯಸ್ಮರಣೆ

ರಾಮನಗರ: ಜಿಲ್ಲಾಡಳಿತದ ವತಿಯಿಂದ 2026–27ನೇ ಸಾಲಿನಲ್ಲಿ ಹಸಿರುಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ, ಭಾರತದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್‌ರಾಂ ರವರ 40ನೇ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಜು.6ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ನ್ಯಾಯಾಲಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಜಿಲ್ಲಾ ನ್ಯಾಯಾಲಯಕ್ಕೆ ನ್ಯಾಯಮೂರ್ತಿಗಳ ಭೇಟಿ

ರಾಮನಗರ: ರಾಜ್ಯ ಹೈಕೋರ್ಟ್ನ ನ್ಯಾಯಮೂರ್ತಿಗಳು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಎಸ್. ವಿಶ್ವಜಿತ್ ಶೆಟ್ಟಿ ಅವರು ಜು. 4ರ ಶನಿವಾರ ನಗರದ ಜಿಲ್ಲಾ ನ್ಯಾಯಾಲಯಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಅವರು ರಾಮನಗರದ ಬಸನಪುರದ ಶ್ರೀ ರಾಮದೇವರ ಬೆಟ್ಟ ರಣಹದ್ದು ವನ್ಯಜೀವಿ ಧಾಮದಲ್ಲಿ ಗಿಡವೊಂದನ್ನು ನೆಟ್ಟರು. ಇದೇ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಎಂ.ಎಚ್. ಅಣ್ಣಯ್ಯನವರ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತ ಪಿ.ಆರ್., ವಲಯ ಅರಣ್ಯಾಧಿಕಾರಿ ಮಹಮ್ಮದ್ ಮನ್ಸೂರ್, ಅರಣ್ಯ ಇಲಾಖೆಯ ಸುಷ್ಮಾ, ಪ್ರಾಧಿಕಾರದ ಸಿಬ್ಬಂದಿಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಎನ್‌ಡಿಆರ್‌ಎಫ್ ಹಣವನ್ನು ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ಡಿಸಿಎಂ ಒತ್ತಾಯ

ಬರ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗುವಂತೆ ತ್ರದುರ್ಗ ಜಿಲ್ಲೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

ಸೂರ್ಯಪ್ರಗತಿನ್ಯೂಸ್.ಕಾಂ



ಚಿತ್ರದುರ್ಗ, :– ಉಪ ಮುಖ್ಯಮಂತ್ರಿಗಳು, ಕಂದಾಯ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಸಚಿವರಾದ ಡಾ.ಜಿ.ಪರಮೇಶ್ವರ ಅವರು ಇಂದು ಚಿತ್ರದುರ್ಗ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಂದಾಯ ಮತ್ತು ವಿಪತ್ತು ನಿರ್ವಹಣಾ ವಿಷಯಗಳ ಕುರಿತು ಪರಿಶೀಲನಾ ಸಭೆಯನ್ನು ನಡೆಸಿ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗಿದೆ. ಮೊದಲನೆಯದಾಗಿ ನಮ್ಮಲ್ಲಿ ಲಕ್ಷಾಂತರ ಜಾನುವಾರುಗಳಿವೆ. ಇವುಗಳನ್ನು ಹೇಗೆ ನಿಭಾಯಿಸುತ್ತೀರಿ. ಈ ಬಗ್ಗೆ ಹೆಚ್ಚು ಗಮನ ಹರಿಸಬೇಕಿದೆ. ಇಂತಹ ಪರಿಸ್ಥಿತಿಯಲ್ಲಿ ಮೇವಿನ ಬೀಜದ ಕಿಟ್‌ಗಳನ್ನು ನೀಡಬೇಕು. 48,000 ಸಾವಿರ ಮೇವಿನ ಬೀಜದ ಕಿಟ್‌ಗಳಿಗೆ ಬೇಡಿಕೆ ಇದೆ. ಯಾವುದಕ್ಕೂ ಕಾಯುವುದು ಬೇಡ. ಬೋರ್‌ವೆಲ್ ಇರುವವರಿಗೆ ಬೀಜ ಕೊಟ್ಟರೆ ಮೇವು ಬೆಳೆದು ಕೊಡುತ್ತಾರೆ. ಆದಷ್ಟು ಬೇಗ ಕಿಟ್ ತರಿಸಿಕೊಂಡು, ನೀರಿನ ಲಭ್ಯ ಇರುವಲ್ಲಿ ನೀಡಿ. ಮೇವಿನ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸೂಚಿಸಿದರು.

ವಾಣಿವಿಲಾಸ ಜಲಾಶಯದಿಂದ ನೀರು ತರಲು ಪರಿಶೀಲನೆ ನಡೆಸಿ, ಎಷ್ಟು ಹಳ್ಳಿಗೆ ತರಲು ಸಾಧ್ಯವಾಗುತ್ತದೆ ಎಂಬುದನ್ನು ಅರಿತುಕೊಳ್ಳಿ. ತುಂಗಾಭದ್ರ ಜಲಾಶಯದಿಂದ ಕುಡಿಯಲು ನೀರು ತಂದರೆ, ಐದು ತಾಲ್ಲೂಕುಗಳಿಗೆ ಅನುಕೂಲವಾಗಲಿದೆ. ಕುಡಿಯುವ ನೀರಿನ ಸಂರಕ್ಷಣೆಗಾಗಿ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಬೇಡಿ ಎಂದು ಬೆಳಗಾವಿಯಲ್ಲಿ ಸೂಚನೆ ನೀಡಿರುವ ಕುರಿತು ಪ್ರಸ್ತಾವನೆ ಮಾಡಿ, ಕೆರೆಗಳಲ್ಲಿ ನೀರು ಇದ್ದರೆ, ಉಳಿಸಿಕೊಳ್ಳಬೇಕು. ಬೆಳೆಗಳಿಗೆ ಬಳಸಬಾರದು ಎಂದು ತಿಳಿಸಿದರು.

ಬೆಳೆ ವಿಮೆ ಸರ್ಕಾರ ತುಂಬಬಹುದು. ಆದರೆ ಕೇಂದ್ರ ಸರ್ಕಾರ ಇದಕ್ಕೆ ಸಹಕಾರ ನೀಡಬೇಕು. ಎಲ್ಲವನ್ನು ರಾಜ್ಯ ಸರ್ಕಾರ ಮಾಡಲು ಆಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಎನ್‌ಡಿಆರ್‌ಎಫ್ ಹಣವನ್ನು ಶೀಘ್ರ ಬಿಡುಗಡೆ ಮಾಡಿಸಲು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು. ಈ ನಿಟ್ಟಿನಲ್ಲಿ ರಾಜ್ಯಕ್ಕೆ ಸಹಕರಿಸಬೇಕು ಚಿತ್ರದುರ್ಗ ಸಂಸದರಾದ ಗೋವಿಂದ ಕಾರಜೋಳ ಅವರನ್ನು ಒತ್ತಾಯಿಸಿದರು.



ನಮ್ಮಲ್ಲಿ ಇರುವ ಹಣವನ್ನು ಸಂಪೂರ್ಣವಾಗಿ ಬರ ಪರಿಸ್ಥಿತಿ ಎದುರಿಸಲು ಬಳಸುತ್ತಿದ್ದು, ಇದರಲ್ಲಿ ಯಾವುದೇ ರಾಜಕೀಯ ಪ್ರಶ್ನೆ ಬರುವುದಿಲ್ಲ. ಅಲ್ಲದೇ ಜನ, ಜಾನುವಾರುಗಳನ್ನು ಉಳಿಸಬೇಕಿದೆ. ಟಾಸ್ಕ್‌ಫೋರ್ಸ್ ಸಭೆಯನ್ನು ಪ್ರತಿ ವಾರ ಕರೆದು, ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಡಿಸಿ, ಸಿಇಒಗಳಿಗೆ ತಿಳಿಸಬೇಕು. ಎಲ್ಲರೂ ಕಡ್ಡಾಯವಾಗಿ ಸಭೆ ನಡೆಸುವಂತೆ ಟಾಸ್ಕ್‌ಫೋರ್ಸ್‌ನ ತಹಶೀಲ್ದಾರ್‌ಗಳಿಗೆ ಸೂಚನೆ ನೀಡಿದರು.

ಚಿತ್ರದುರ್ಗದಲ್ಲಿ ಒಟ್ಟು 201 ಮಳೆ ಮಾಪನ ಕೇಂದ್ರಗಳಿವೆ. ಅದರಲ್ಲಿ 109 ಮಳೆ ಮಾಪನಗಳು ಕೆಲಸ ಮಾಡುತ್ತಿವೆ. ಕೆಟ್ಟಿರುವ ಕೇಂದ್ರಗಳನ್ನು ಆದಷ್ಟು ಬೇಗ ದುರಸ್ತಿಗೊಳಿಸಿ ಎಲ್ಲ ಮಳೆ ಮಾಪನ ಕೇಂದ್ರಗಳು ಕಾರ್ಯನಿರ್ವಹಣೆಯಲ್ಲಿರುವಂತೆ ನೋಡಿಕೊಳ್ಳಲು ಸೂಚಿಸಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ಗಣಿಬಾಧಿತ ಪ್ರದೇಶ ಪರಿಸರ ಪುನಶ್ಚೇತನದ ಅನುದಾನದಡಿ 531 ಕೋಟಿ ಲಭ್ಯವಿದೆ. ರಾಜ್ಯದಲ್ಲಿ 32 ಸಾವಿರ ಕೋಟಿ ಇದೆ. ಚಿತ್ರದುರ್ಗ ಜಿಲ್ಲೆಯನ್ನು ಯೂನಿಟ್ ಎಂದು ಪರಿಗಣಿಸುವಂತೆ ಈ ಸಂದರ್ಭದಲ್ಲಿ ಒತ್ತಾಯಿಸಿದರು. ಅನುದಾನವನ್ನು ಬಳಸಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. ಈ ಬಗ್ಗೆ ಗಣಿಬಾಧಿತ ಪ್ರದೇಶ ಪರಿಸರ ಪುನಶ್ಚೇತನದ ಅಧ್ಯಕ್ಷರೊಂದಿಗೆ ಮಾತನಾಡುವುದಾಗಿ ಭರವಸೆ

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಬಿಎಲ್‌ಓ ಗಳು ಮನೆ ಮನೆ ಭೇಟಿ ಕಡ್ಡಾಯ: ಡಾ.ಪಿ ಸಿ ಜಾಫರ್



ಬೆಂ.ಗ್ರಾ ಜಿಲ್ಲೆ –ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರಪರಿಷ್ಕರಣೆಯು(ಎಸ್‌ಐಆರ್) ಜಿಲ್ಲೆಯಾದ್ಯಂತ ಆರಂಭವಾಗಿದ್ದು ಬಿಎಲ್‌ಒಗಳು ಕಡ್ಡಾಯವಾಗಿ ಮನೆ ಮನೆ ಭೇಟಿ ನೀಡಿ ಮತದಾರರಿಗೆ ಗಣತಿ ನಮೂನೆ (ಎನ್ಯುಮರೇಶನ ಫಾರ್ಮ್) ವಿತರಿಸಿ, ಭರ್ತಿ ಮಾಡಿಸಿ ವಾಪಸ್ ಪಡೆಯಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಪಿ ಸಿ ಜಾಫರ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮತದಾರ ಪಟ್ಟಿಯಲ್ಲಿ ಯಾವುದೇ ಅರ್ಹ ನಾಗರಿಕರು ಬಿಟ್ಟು ಹೋಗಬಾರದು ಮತ್ತು ಯಾವುದೇ ಅನರ್ಹ ವ್ಯಕ್ತಿಗಳನ್ನು ಸೇರ್ಪಡೆ ಮಾಡಬಾರದು ಎಂಬ ಉದ್ದೇಶದಿಂದ ಚುನಾವಣಾ ಆಯೋಗದಿಂದ ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲಾಗುತ್ತಿದೆ ಎಂದರು. ಮನೆಗೆ ಬರುವ ಬಿಎಲ್‌ಒಗಳು ಎರಡು ಗಣತಿ ನಮೂನೆಗಳನ್ನು (ಎನ್ಯುಮರೇಶನ ಫಾರ್ಮ್) ನೀಡುತ್ತಾರೆ. ಮತದಾರರು ಎರಡನ್ನು ಭರ್ತಿ ಮಾಡಿ ಸಹಿ ಮಾಡಬೇಕು. ಒಂದನ್ನು ಸ್ವೀಕೃತಿಯಾಗಿ ಮತದಾರರಿಗೆ ಮರಳಿಸಿದರೆ, ಇನ್ನೊಂದು ಪ್ರತಿಯನ್ನು ಅಧಿಕಾರಿಗಳು ತೆಗೆದುಕೊಂಡು ಹೋಗುತ್ತಾರೆ. ಅದನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ಸಂಗ್ರಹ ಮಾಡಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಬಿಎಲ್‌ಒಗಳ ಪಾತ್ರ ದೊಡ್ಡದು, ಗಣತಿ ನಮೂನೆ ಸ್ವೀಕೃತಿಯಾದ ನಂತರ ಅವುಗಳನ್ನು ಡಿಜಿಟಲೀಕರಣ(ಬಿಎಲ್‌ಒಆಪ್) ಮಾಡಿ ನಂತರ ಅವುಗಳನ್ನು ಸುರಕ್ಷಿತವಾಗಿ ಇಡಬೇಕಾಗಿರುವುದು ತಹಶೀಲ್ದಾರ್ ಅವರ ಜವಾಬ್ದಾರಿಯಾಗಿದೆ ಎಂದರು.

ಎಸ್‌ಆರ್ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು, ಇತ್ತೀಚಿನ ಘಟನಾವಳಿಗಳು ಗಮನಿಸಿದರೆ ಸಾಕಷ್ಟು ಆರೋಪಗಳು ಬರುವುದು ಸಹಜ, ಅಂತಹ ಆರೋಪಿಗಳಿಗೆ ಅಧಿಕಾರಿಗಳು ಆಸ್ಪದ ನೀಡಬೇಡಿ, ಅಧಿಕಾರಿಗಳು ಯಾರಿಗೂ ಸಹಾಯ ಮಾಡೋದು ಬೇಡ, ಯಾರಿಗೂ ತೊಂದರೆ ಕೊಡೋದು ಬೇಡ. ಗುಂಪು ಗುಂಪಾಗಿ ಎಸ್‌ಆರ್ ಪ್ರಕ್ರಿಯೆ ಮಾಡುವುದು ಬೇಡ, ತಪ್ಪಿತಸ್ಥರು ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು, ನಿಮ್ಮ ಜವಾಬ್ದಾರಿಯಲ್ಲಿ ಚುನಾವಣೆ ಆಯೋಗದ ನಿರ್ದೇಶನದಂತೆ ಕೆಲಸ ಮಾಡಿ,ಪಾರದರ್ಶಕವಾಗಿ ನಡೆಯಲಿ ಎಂದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

ಹೇಮಾವತಿ ನೀರು ಉಳಿಸಿಕೊಳ್ಳಲು ಹೋರಾಟ ಅನಿವಾರ್ಯ ಲಿಂಕ್ ಕೆನಾಲ್ ಯೋಜನೆ ಜಿಲ್ಲೆಗೆ ಮಾರಕ: ಸೊಗಡು ಶಿವಣ್ಣ

ತುಮಕೂರು: ನಮ್ಮ ಜಿಲ್ಲೆಗೆ ಹಂಚಿಕೆಆಗಿರುವ ಹೇಮಾವತಿ ನೀರನ್ನು ಉಳಿಸಿಕೊಳ್ಳಲು, ಜಿಲ್ಲೆಯಜನರ ಪಾಲಿಕೆ ಮಾರಕವಾಗುವ ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್‌ಯೋಜನೆ ವಿರುದ್ಧ ಒಗ್ಗಟ್ಟಿನ ಹೋರಾಟ ಮಾಡಬೇಕು. ಕೆಲವು ರಾಜಕಾರಣಿಗಳು ತಮ್ಮ ಲಾಭಕ್ಕಾಗಿ ಇಲಾಖೆ ಅಧಿಕಾರಿಗಳ ಮೇಲೆ ಒತ್ತರಡ ಹಾಕಿ ಜಿಲ್ಲೆಯ ನೀರಾವರಿ ಯೋಜನೆಗಳನ್ನು ವಿರೂಪಗೊಳಿಸಲು ಪ್ರಯತ್ನಿಸಿದ್ದಾರೆ ಎಂದು ಮಾಜಿ ಸಚಿವ ಸೊಗಡು ಶಿವಣ್ಣ ಆರೋಪಿಸಿದರು.

ಶನಿವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದಅವರು, ಎಕ್ಸ್‌ಪ್ರೆಸ್‌ಕೆನಾಲ್ ಯೋಜನೆ ಸಾಕಾರಗೊಳ್ಳಲು ಅವಕಾಶ ಮಾಡಿಕೊಟ್ಟರೆ ಮುಂದೆ ನಮ್ಮ ಪಾಲಿನ ನೀರನ್ನು ಕಳೆದುಕೊಂಡು ಹಾಹಾಕಾರ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಈಗಿನಿಂದಲೇಎಚ್ಚೆತ್ತುಕೊಂಡು ಹೋರಾಟದ ಮೂಲಕ ನೀರು ಉಳಿಸಿಕೊಳ್ಳಬೇಕು ಎಂದರು.

ಹೇಮಾವತಿಯೋಜನೆಯ ಭಾಗವಾದ ಹೇಮಾವತಿ ನಾಲಾ ವಲಯ, ತುಮಕೂರು ವ್ಯಾಪ್ತಿಯಲ್ಲಿ ತುಮಕೂರು ಶಾಖಾ ನಾಲೆ ಹಾಗೂ ನಾಗಮಂಗಲ ಶಾಖಾ ನಾಲೆ ಮತ್ತು ಬಾಗೂರು ನವಿಲೆ ಸುರಂಗ ನಿರ್ಗಮನವಿತ ನೀರಾವರಿ ಯೋಜನೆಗಳ ಕಾರ್ಯ ವ್ಯಾಪ್ತಿಯನ್ನು ಒಳಗೊಂಡಿದ್ದು, ತುಮಕೂರುಜಿಲ್ಲೆ ಹಾಗೂ ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿ ನಒಟ್ಟಾರೆ 2,89,230 ಎಕರೆಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯಕಲ್ಪಿಸಲು ಮತ್ತು ತುಮಕೂರು, ಮಂಡ್ಯ, ರಾಮನಗರ, ಹಾಸನ, ಚಿಕ್ಕಮಗಳೂರು ಹಾಗೂ ಚಿತ್ರದುರ್ಗಜಿಲ್ಲೆಯ ಕೆಲವು ತಾಲ್ಲೂಕಗಳ ಕುಡಿಯುವ



ನೀರಿನ ಬೇಡಿಕೆಗಳನ್ನು ಪೂರೈಸುವುದು ಒಳಗೊಂಡಂತೆ 25.31 ಟಿಎಂಸಿ ನೀರಿನ ಹಂಚಿಕೆಆಗಿರುತ್ತದೆ. ಇದರಲ್ಲಿ ನೀರಾವರಿಗೆ 18.70 ಟಿಎಂಸಿ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ 6.61 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿದೆ ಎಂದರು.

ಹೇಮಾವತಿ ಜಲಾಶಯದ ಮುಖ್ಯ ಕಾರಣಕರ್ತರು ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರು ಮತ್ತುಡಾ. ಕೆ.ಎಲ್. ರಾವ್ ಅವರು. ತುಮಕೂರುಜಿಲ್ಲೆಗೆ ಹೇಮಾವತಿ ನೀರುತರಲು ಅನೇಕ ಮಹನೀಯರು ಹೋರಾಟ ನಡೆಸಿ ಶ್ರಮಪಟ್ಟಿದ್ದಾರೆ. ಮಾಜಿ ಸಚಿವ ದಿವಂಗತ ವೈ. ಕೆ .ರಾಮಯ್ಯನವರು ಹೇಮಾವತಿ ನೀರಿನಲ್ಲಿ ನಮ್ಮ ಪಾಲು ಇದೆ, ಹೇಮಾವತಿ ನೀರನ್ನು ತುಮಕೂರು ಜಿಲ್ಲೆಗೆ ತರಲೇಬೇಕೆಂದು ಹೋರಾಟವನ್ನು ಆರಂಭಿಸಿದರು.ಈ ಹಂತದಲ್ಲಿತಾವೂ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾಗಿ ಸೊಗಡು ಶಿವಣ್ಣ ಹೇಳಿದರು.

ನಗರದ ಬಟವಾಡಿಯಲ್ಲಿ ತಾವು ಉಗ್ರ ಹೋರಾಟ ಆರಂಭಿಸಿದ್ದನ್ನು ಸ್ಮರಿಸಿಕೊಂಡ ಸೊಗಡು ಶಿವಣ್ಣನವರು, ಈ ಹೋರಾಟದಲ್ಲಿ ಎಲ್ಲ ರೈತರನ್ನು ಗಣನೆಗೆ ತೆಗೆದುಕೊಂಡು ವೈ.ಕೆ.ರಾಮಯ್ಯನವರು ಹೋರಾಟ ಮುಂದುವರೆಸಿದರು. ಆಗ ಹೇಮಾವತಿ ನೀರು ತುಮಕೂರು ಜಿಲ್ಲೆಗೆ ದಕ್ಕಿತು.ಈ ಹಂತದಲ್ಲಿ ವೈಕೆ ರಾಮಯ್ಯನವರ ಜೊತೆಗೆ ಹಾಗಲವಾಡಿ ಕಮ್ಯುನಿಸ್ಟ್ ನಾಯಕ ದಿವಂಗತ ಚೆನ್ನಪ್ಪನವರೂ ಇದ್ದರುಎಂಬುದನ್ನು ಮರೆಯುವಂತಿಲ್ಲ. ಇದನ್ನೆಲ್ಲಾ ನೋಡಿದರೆ ವೈ.ಕೆ.ರಾಮಯ್ಯನವರು ಹೇಮಾವತಿಯನ್ನು ತುಮಕೂರು ಜಿಲ್ಲೆಗೆ ಕರೆತಂದ ಆಧುನಿಕ ಭಗೀರಥ ಎಂದರೆ ತಪ್ಪಾಗಲಾರದು ಎಂದು ಹೇಳಿದರು.

ನೀರಾವರಿ ತಜ್ಞ ಸಂಪಿಗೆ ಜಗದೀಶ್ ಮಾತನಾಡಿ, ತುಮಕೂರು ಜಿಲ್ಲೆಯ ಜನರಿಗೆ ಹೇಮಾವತಿ ನೀರು ಜೀವನಾಡಿ, ನಮಗೆ ಹಂಚಿಕೆಯಾಗಿರುವ ನೀರನ್ನು ಉಳಿಸಿಕೊಂಡು ಸದ್ಬಳಕೆ ಮಾಡಿಕೊಳ್ಳಲು ಹೋರಾಟವೇ ಮುಂದಿನ ದಾರಿ. ಇದಕ್ಕಾಗಿಎಲ್ಲರೂ ಪಕ್ಷ ಬೇಧಮರೆತು ಹೋರಾಟ ನಡೆಸಬೇಕು.ನಮ್ಮ ನೀರು, ನಮ್ಮ ಹಕ್ಕು ಪ್ರತಿಪಾದಿಸಬೇಕು ಎಂದು ಮನವಿ ಮಾಡಿದರು.

ಈ ಯೋಜನೆಯುಜಿಲ್ಲೆಯಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಮತ್ತುಕುಡಿಯುವ ನೀರನ್ನು ಪೂರೈಸಲು ಪ್ರಮುಖ ಕೊಡುಗೆ ನೀಡುತ್ತದೆ. ಮೂಲ ಯೋಜನೆ ಪ್ರಕಾರ ಹೇಮಾವತಿ ಜಲಾಶಯ ಯೋಜನೆ ಸಂಪೂರ್ಣ ನೀರಾವರಿಯೋಜನೆಯಾಗಿದ್ದು, ಅದನ್ನು ಸಾಕಾರಗೊಳಿಸುವಲ್ಲಿ ಇಚ್ಛಾಶಕ್ತಿ ಕಂಡುಬಂದಿಲ್ಲ ಎಂದು ವಿಷಾದಿಸಿದರು.

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ಸಾಕಾರ ಗೊಂಡರೆ ಅದು ತುಮಕೂರು ಜಿಲ್ಲೆಯ ಜನರ ಪಾಲಿಗೆ ಮರಣ ಶಾಸನವಾಗಲಿದೆ. ಜಿಲ್ಲೆಯಲ್ಲಿ ಕಾಲುವೆಗಳು ಆಗುತ್ತಿದ್ದವೇ ಹೊರತು ಇದೂವರೆಗೆ ಅಚ್ಚುಕಟ್ಟು ಘೋಷಣೆ ಮಾಡಿಲ್ಲ. ಹೀಗಾಗಿ ಜಿಲ್ಲೆಯ ನೀರಿನ ಪ್ರಮಾಣ ಕಳೆದು ಕೊಳ್ಳಬೇಕಾಯಿತು. ಈಗ ಉಳಿದಿರುವುದು ಒಂದೇ ಮಾರ್ಗ: ಅದು ಜಿಲ್ಲೆಗೆ ಹಂಚಿಕೆ ಆಗಿರುವ ನೀರನ್ನು ಉಳಿಸಿಕೊಳ್ಳುವುದು. ಅದಕ್ಕಾಗಿ ಹೋರಾಟವೇ ಉಳಿದಿರುವ ಏಕೈಕ ಮಾರ್ಗಎಂದು ಸಂಪಿಗೆ ಜಗದೀಶ್ ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಪಂಚಾಕ್ಷರಯ್ಯ, ತುಮಕೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ಪಿ.ಮಹೇಶ್, ಕನ್ನಡ ಸೇನೆಜಿಲ್ಲಾಧ್ಯಕ್ಷ ಧನಿಯಾಕುಮಾರ್, ರೈತ ಸಂಘದಜಿಲ್ಲಾಧ್ಯಕ್ಷ ಹೆಚ್.ಡಿ.ರಾಮಲಿಂಗಯ್ಯ, ಮುಖಂಡರಾದ ಡಾ.ಆರ್. ಮಂಜುನಾಥ್, ಗೋವಿಂದರಾಜು, ಎ.ಆರ್.ಶ್ರೀಕಾಂತ್, ತರಕಾರಿ ಮಹೇಶ್, ಆಟೋ ನವೀನ್, ಕೆ. ಹರೀಶ್, ಎನ್. ಗಣೇಶ್, ಮದನ್‌ಸಿಂಗ್, ವಿನಯ್ ಅದ್ವೈತ ಮೊದಲಾದವರು ಉಪಸ್ಥಿತರಿದ್ದರು.

ಸಣ್ ಸುದ್ದಿ



ತುಮಕೂರಿನ ಆರ್.ಟಿ.ನಗರದ ಹೋರಿ ಮುದ್ದಪ್ಪ ಬಡಾವಣೆಯ ಸಿದ್ಧಿ ಗಣಪತಿ ದೇವಾಲಯದಲ್ಲಿ ಸಂಕಷ್ಟಹರ ಚತುರ್ಥಿ ಪ್ರಯುಕ್ತ ವಿಶೇಷವಾಗಿ ಗಣಪನಿಗೆ ಎಕ್ಕದ ಹೂವಿನ ಅಲಂಕಾರ ಏರ್ಪಡಿಸಲಾಗಿತ್ತು. ಬಂದ ಭಕ್ತಾದಿಗಳಿಗೆ ವಿಶೇಷವಾಗಿ ಅನ್ನಸಂತರ್ಪಣೆಯನ್ನು ಪೂಜಾ ಸೇವಾಕರ್ತರಾದ ಪದ್ಮನಾಭ ಆಚಾರ್ ಕುಟುಂಬದವರು ನೆರವೇರಿಸಿದರು.

ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ : ಆನ್‌ಲೈನ್ ಅರ್ಜಿ ಆಹ್ವಾನ

ತುಮಕೂರು: ಕೇಂದ್ರದ ಶಿಕ್ಷಣ ಮಂತ್ರಾಲಯ ವ್ಯಾಪ್ತಿಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು 2026ನೇ ಸಾಲಿನ ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗಾಗಿ ಆನ್‌ಲೈನ್ ಪೋರ್ಟಲ್ http://nationalawardstoteachers.education.gov.in ಅಥವಾ https://schooleducation.karnataka.gov.inರ ವೆಬ್ ತಾಣದ ಕೊಂಡಿ ಮೂಲಕ ಅರ್ಜಿಯನ್ನು ಆಹ್ವಾನಿಸಿದೆ. ಜಿಲ್ಲೆಯ ಆಸಕ್ತ ಶಿಕ್ಷಕರು ಮೇಲ್ಕಂಡ ವೆಬ್ ಸೈಟ್‌ನಲ್ಲಿರುವಂತೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶೇಷ ಚೇತನರಿಂದ ಎಸ್‌ಐಆರ್ ಕುರಿತು ಜಾಗೃತಿ..!



ತಿಪಟೂರು ನಗರದಲ್ಲಿ ವಿಶೇಷ ಚೇತನರಿಂದ ತ್ರಿಚಕ್ರ ವಾಹನದ ಮೂಲಕ ಎಸ್ ಐ ಆರ್ ಕುರಿತು ಜಾಗೃತಿ ಬೈಕ್ ಜಾಥಾ ಹಮ್ಮಿಕೊಳ್ಳಲಾಗಿತ್ತು.

ತಿಪಟೂರು ತಾಲ್ಲೂಕು ಸ್ವೀಪ್ ಸಮಿತಿ, ತಿಪಟೂರು ತಾಲ್ಲೂಕು ಪಂಚಾಯಿತಿ ವತಿಯಿಂದ ವಿಶೇಷ ಚೇತನರು ಹಮ್ಮಿಕೊಂಡಿದ್ದ ಬೈಕ್ ಜಾಥಾಕ್ಕೆ ಚಾಲನೆ ನೀಡಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಹೆಚ್ ಎಂ ಸುದರ್ಶನ್ ಅವರು ಮಾತನಾಡಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ಯಾವೊಬ್ಬ ಅರ್ಹ ಮತದಾರರೂ ಹೊರಗುಳಿಯಬಾರು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭದ್ರವಾಗಿಸುವ ನಿಟ್ಟಿನಲ್ಲಿ ಮತದಾರರು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಆ ನಿಟ್ಟಿನಲ್ಲಿ ಭಾರತದ ಕಟ್ಟಕಡೆಯ ಅರ್ಹ ಮತದಾರರೂ ಎಲ್ಲಾ ವರ್ಗದವರೂ ಭಾಗವಹಿಸುವಂತೆ ಇಂದು ವಿಶೇಷ ಚೇತನರು ಬೈಕ್ ಜಾಥಾ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ.ಎಸ್‌ಐಆರ್ ಕುರಿತು ತಿಪಟೂರು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಅರಿವು ಮೂಡಿಸಿದರು. ಈ ವೇಳೆ ತಾಲ್ಲೂಕು ಪಂಚಾಯಿತಿ ನೋಡಲ್ ಅಧಿಕಾರಿಗಳಾದ ಹುಲಿರಾಜು, ವಿಶೇಷ ಚೇತನ ಸಂಘದ ಮುಖಂಡ ಇನಾಯತ್, ಗ್ರಾಮ ಪಂಚಾಯಿತಿ ಒಖಿಘ, ಗಖಇ,ಗಿಖಘ ಸಿಬ್ಬಂದಿಗಳು, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.



ತುಮಕೂರು : ಕರ್ನಾಟಕ ರಾಜ್ಯ ಕಲಾವಿದರ ಹಿತರಕ್ಷಣಾ ಸಂಘ ವತಿಯಿಂದ ಅಕಾಲಿಕವಾಗಿ ಮರಣ ಹೊಂದಿದ ಕೆ.ಎನ್.ಕೃಷ್ಣಮೂರ್ತಿ ರಾವ್ ರವರ ಕುಟುಂಬದವರಿಗೆ ಸಂಘದ ವತಿಯಿಂದ ಆರ್ಥಿಕ ಸಹಾಯ ಮಾಡಲಾಯಿತು. ಈ ಸಂದರ್ಭದಲ್ಲಿ ಪಾಪಣ್ಣ ರವರು ಮಾತನಾಡುತ್ತಾ ಕಲಾವಿದರು ಮುಕ್ತವಾಗಿ ಭಾಗವಹಿಸಿ ಕಲಾವಿದರ ಸಂಕಷ್ಟದ ಸಮಯದಲ್ಲಿ ರಕ್ಷಣೆಗೆ ಎಲ್ಲಾ ಕಲಾವಿದರು ಒಟ್ಟಾಗಿ ಸೇರಬೇಕು ಎಂದು ತಿಳಿಸಿದರಲ್ಲದೇ ರಾಜ್ಯ ಸರ್ಕಾರವು ಕಲಾವಿದರಿಗೆ ಕಲಾವಿದರ ನಿಗಮವನ್ನು ತೆರೆದು ಅದರಲ್ಲಿ ಕಲಾವಿದರಿಗೆ ಹಣವನ್ನು ಮೀಸಲಿಡಬೇಕೆಂದರಲ್ಲದೇ, ಜೀವ ವಿಮೆಯನ್ನು ಸರ್ಕಾರದ ವತಿಯಿಂದ ಮಾಡಿಕೊಡಬೇಕು ಹಾಗೂ ಹಿರಿಯ ಕಲಾವಿದರಿಗೆ ಪಿಂಚಣಿ ಮಾಡಿಕೊಡಬೇಕೆಂದು ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಹ ಸಲ್ಲಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕಲಾವಿದರ ಹಿತರಕ್ಷಣಾ ಸಂಘದ ಜಿಲ್ಲಾಧ್ಯಕ್ಷರು ಹಾಗೂ ತಾಲೂಕಿನ ಅಧ್ಯಕ್ಷರುಗಳು ಹಾಗೂ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

ಜೆಡಿಎಸ್‌ಯುವ ಘಟಕಕ್ಕೆ ನೇಮಕ



ತುಮಕೂರು: ಜಿಲ್ಲಾಜೆಡಿಎಸ್ ಅಧ್ಯಕ್ಷ ಹೆಚ್. ನಿಂಗಪ್ಪ ಅವರು ನಗರ ಯುವ ಘಟಕಕ್ಕೆ ವಿವಿಧ ಪದಾಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ನಗರದ ಪಕ್ಷದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ನಗರ ಯುವ ಘಟಕ ಸಂಘಟನಾ ಕಾರ್ಯದರ್ಶಿಯಾಗಿ ಮಂಜುನಾಥ್ ಹಾಗೂ ಉಪಾಧ್ಯಕ್ಷರಾಗಿ ಚಾಯ್ ಸೂರಿ ಅವರನ್ನು ನೇಮಕ ಮಾಡಿ ನೇಮಕಾತಿ ಪತ್ರ ನೀಡಿದರು.

ಈ ವೇಳೆ ನಗರಅಧ್ಯಕ್ಷ ಟಿ.ಹೆಚ್. ಜಯರಾಮ್, ಕಾರ್ಯಾಧ್ಯಕ್ಷ ಟಿ.ಎಸ್. ಮೋಹನ್‌ಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರೇಖಾರಾಜ್ ಗೌಡ, ನಗರ ಅಧ್ಯಕ್ಷೆ ಲಕ್ಷ್ಮಿ ನಾಯಕ್, ನಗರಸಭೆ ಮಾಜಿ ಸದಸ್ಯಟಿ.ಜಿ. ನರಸಿಂಹರಾಜು, ನಗರ ಮಹಾ ಪ್ರಧಾನ ಕಾರ್ಯದರ್ಶಿ ಟಿ.ಸಿ. ಪ್ರಭಾಕರ್, ಮುಖಂಡರಾದಗಂಗಣ್ಣ, ತಾಹೇರಾಕುಲ್ಸಂ, ರಾಧಾಗೌಡ, ಲಕ್ಷ್ಮಮ್ಮ ವೀರಣ್ಣಗೌಡ ಮೊದಲಾದವರು ಭಾಗವಹಿಸಿದ್ದರು.

ಮಕ್ಕಳಿಗೆ ತಾತ್ಕಾಲಿಕ ಕುಟುಂಬ ಕಲ್ಪಿಸಲು ಪೋಷಕರಿಂದ ಅರ್ಜಿ ಆಹ್ವಾನ

ತುಮಕೂರು: ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ–2015 ಸೆಕ್ಷನ್ 44ರಡಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗಿರುವ 6 ರಿಂದ 18 ವರ್ಷದೊಳಗಿನ ಮಕ್ಕಳಿಗೆ ತಾತ್ಕಾಲಿಕವಾಗಿ ಕುಟುಂಬದ ವಾತಾವರಣ ಕಲ್ಪಿಸಲು ಅರ್ಹ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಯೊಂದು ಮಗುವು ಪ್ರೀತಿ, ವಾತ್ಸಲ್ಯದೊಂದಿಗೆ ಕುಟುಂಬದಲ್ಲಿ ಬೆಳೆಯುವ ಹಕ್ಕನ್ನು ಹೊಂದಿದ್ದು, ಕುಟುಂಬವು "ಮಕ್ಕಳ ಬದುಕಿಗೆ ಜೀವನಾಡಿ"ಯಾಗಿ ಮಹತ್ತರವಾದ ಪಾತ್ರ ವಹಿಸುತ್ತದೆ. ಪೋಷಕರು ಕುಟುಂಬದ ಕೇಂದ್ರ ಬಿಂದುವಾಗಿ ಮಕ್ಕಳ ಸುರಕ್ಷತೆಯನ್ನು ಕಾಪಾಡುವುದು ಮತ್ತು ಅವರಿಗೆ ಮಮತೆಯ ಸಾನಿಧ್ಯಗಳನ್ನು ಎಲ್ಲಾ ಸಂದರ್ಭಗಳಲ್ಲೂ ಒದಗಿಸುವುದಾಗಿದೆ. ಆದರೆ ಕಾರಣಾಂತರಗಳಿಂದ ಕೆಲವು ಮಕ್ಕಳು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲು ಮಾಡುವ ಅನಿವಾರ್ಯತೆ ಉಂಟಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮಗುವನ್ನು ಸ್ವಂತ ಕುಟುಂಬದಲ್ಲಿ ಇರಿಸಲು ಸಾಧ್ಯವಾಗದಿದ್ದಾಗ, ಅಂತಹ ಮಕ್ಕಳಿಗೆ ತಾತ್ಕಾಲಿಕವಾಗಿ ಕುಟುಂಬದ ಆರೈಕೆಯನ್ನು ಒದಗಿಸುವ ಹಿತದೃಷ್ಟಿಯಿಂದ "ಪೋಷಕತ್ವ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

ಈ ಕಾರ್ಯಕ್ರಮವು ಕುಟುಂಬದ ಆರೈಕೆಯ ಅಗತ್ಯವಿರುವ ಮಕ್ಕಳನ್ನು ಅವರ ಜೈವಿಕ ಪೋಷಕರನ್ನು ಹೊರತುಪಡಿಸಿ, ಬೇರೆ ಕುಟುಂಬವು ತಾತ್ಕಾಲಿಕವಾಗಿ ತಮ್ಮ ಮನೆಯಲ್ಲಿ ಆಶ್ರಯ ನೀಡಿ, ಮಗುವಿನ ದೈಹಿಕ, ಮಾನಸಿಕ ಮತ್ತು ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ವ್ಯವಸ್ಥೆಯಾಗಿದೆ. ಇದು ದತ್ತು ಸ್ವೀಕಾರವಲ್ಲ, ಬದಲಾಗಿ ಮಗುವಿಗೆ ಕುಟುಂಬದ ಪರಿಸರವನ್ನು ಒದಗಿಸುವ ಪ್ರೀತಿಯ ಸೇವೆಯಾಗಿದೆ. ಮಕ್ಕಳ ಹಿತಾಸಕ್ತಿಯೇ ಇಲ್ಲಿ ಸರ್ವೋಚ್ಚವಾಗಿದ್ದು, ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಈ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತದೆ.

ಈ ಹಿನ್ನೆಲೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ 6 ರಿಂದ 18 ವರ್ಷದೊಳಗಿನ ಮಕ್ಕಳನ್ನು ಕುಟುಂಬದ ವಾತಾವರಣಕ್ಕೆ ಅಳವಡಿಸಿಕೊಂಡು ಉತ್ತೇಜನ ನೀಡಲು, ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ಬೆಳೆಯಲು ಅವಕಾಶ ನೀಡುವ ನಿಟ್ಟಿನಲ್ಲಿ ಮಕ್ಕಳನ್ನು ತಾತ್ಕಾಲಿಕವಾಗಿ ಪಾಲನೆ, ಪೋಷಣೆ, ಸಾಮಾಜಿಕ ಮತ್ತು ಭಾವನಾತ್ಮಕ ಭದ್ರತೆಯನ್ನು ಒದಗಿಸಲು ಮಗುವನ್ನು ಪಡೆಯಲು ಆಸಕ್ತ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಮಕ್ಕಳಿಗೆ ಸುರಕ್ಷಿತ ಮತ್ತು ಪ್ರೀತಿಯ ವಾತಾವರಣ ನೀಡಬಲ್ಲವರು ಹಾಗೂ ಮಕ್ಕಳನ್ನು ಪಾಲನೆ ಮಾಡಲು ಮಾನಸಿಕವಾಗಿ ಸಿದ್ಧರಿರುವ ಅಥವಾ ಮಕ್ಕಳ ಮೇಲೆ ಕಾಳಜಿ ಇರುವ ಯಾವುದೇ ಅರ್ಹ ದಂಪತಿ/ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಭರ್ತಿ ಮಾಡಿದ ಅರ್ಜಿಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೊದಲನೇ ಮಹಡಿ, ಮಹಾತ್ಮಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು ಕಚೇರಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 0816–2956699, ಮೊ.ಸಂ.9110857472ನ್ನು ಸಂಪರ್ಕಿಸಬೇಕೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪವಿತ್ರ ಮನವಿ ಮಾಡಿದ್ದಾರೆ.

ಪದವಿ ಪೂರ್ವ ಕಾಲೇಜು ಉಪನ್ಯಾಸಕರನ್ನು ಪ್ರೌಢಶಾಲೆಗಳಿಗೆ ವರ್ಗಾಯಿಸುವ ಕರಡು ನಿಯಮ

ಜುಲೈ 9ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ; ಉಪನ್ಯಾಸಕರ ಸಂಘ ತೀರ್ಮಾನ

ತುಮಕೂರು: ಪದವಿಪೂರ್ವ ಕಾಲೇಜು ಉಪನ್ಯಾಸಕರನ್ನು ಪ್ರೌಢಶಾಲೆಗಳಿಗೆ ವರ್ಗಾಯಿಸುವ ಕರಡು ನಿಯಮ ಖಂಡಿಸಿ, ಜುಲೈ 9ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಮತ್ತು ಸತ್ಯಾಗ್ರಹ ಇಂದು ನಡೆದ ಪದವಿಪೂರ್ವ ಉಪನ್ಯಾಸಕರ ಸಂಘದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ನಗರದ ಸರಕಾರಿ ಜೂನಿಯರ್ ಕಾಲೇಜಿನಲ್ಲಿ ನಡೆದ ಸಂಘದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.ಕರ್ನಾಟಕ ಸರಕಾರ ಹೊರಡಿಸಿರುವ ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿಪೂರ್ವ ಶಿಕ್ಷಣ) (ನೇಮಕಾತಿ) (ತಿದ್ದುಪಡಿ) ಕರಡು ನಿಯಮಗಳು2026ರಮೂಲಕಪದವಿಪೂರ್ವ ಕಾಲೇಜುಗಳ ಉಪನ್ಯಾಸಕರನ್ನು 9 ಮತ್ತು 10ನೇ ತರಗತಿಗಳಬೋಧನೆಗೆನಿಯೋಜಿಸುವಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯಪದವಿಪೂರ್ವ ಕಾಲೇಜು ಉಪನ್ಯಾಸಕರಸಂಘ (ರಿ.)ತೀವ್ರವಾಗಿ ಖಂಡಿಸಿದೆ.

ಈ ಕರಡು ನಿಯಮವು ಪದವಿಪೂರ್ವ ಶಿಕ್ಷಣದ ಗುಣಮಟ್ಟವನ್ನು ಕುಗ್ಗಿಸುವುದರ ಜೊತೆಗೆ ಲಕ್ಷಾಂತರ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಪದವಿಪೂರ್ವ ಉಪನ್ಯಾಸಕರು ವಿಷಯ ಪರಿಣಿತರಾಗಿದ್ದು,ಓಇಇಖ, ಎಇಇ, ಅಇಖ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಅವರನ್ನು ಪ್ರೌಢಶಾಲೆಗಳಿಗೆ ವರ್ಗಾಯಿಸುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಕ್ಕೆ ಧಕ್ಕೆಯಾಗಲಿದೆ ಎಂದು ಸಭೆ ಅಭಿಪ್ರಾಯಪಟ್ಟಿದೆ.



ಸರಕಾರವು ಈ ಮಹತ್ವದ ನಿರ್ಧಾರವನ್ನು ಉಪನ್ಯಾಸಕರು, ಪ್ರಾಂಶುಪಾಲರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ಯಾವುದೇ ಸಮಾಲೋಚನೆ ನಡೆಸದೆ ಏಕಪಕ್ಷೀಯವಾಗಿ ಕೈಗೊಂಡಿರುವುದು ಖಂಡನೀಯವಾಗಿದೆ. ಅಲ್ಲದೆ, ಈ ಕರಡು ನಿಯಮಗಳಿಗೆ ಪೂರಕವಾದ ಯಾವುದೇ ವೈಜ್ಞಾನಿಕ ಅಧ್ಯಯನ ಅಥವಾ ಶೈಕ್ಷಣಿಕ ಮೌಲ್ಯಮಾಪನವನ್ನು ಸರ್ಕಾರ ಇದುವರೆಗೆ ಸಾರ್ವಜನಿಕವಾಗಿ ಪ್ರಕಟಿಸಿಲ್ಲ.ಆದ್ದರಿಂದ ಈ ಕರಡು ನಿಯಮಗಳನ್ನು ತಕ್ಷಣ ಹಿಂಪಡೆಯಬೇಕು, ಪದವಿಪೂರ್ವ ಉಪನ್ಯಾಸಕರ ಸ್ವತಂತ್ರ ವೃಂದವನ್ನು ಉಳಿಸಬೇಕು ಹಾಗೂ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಿ ಸಮಗ್ರ ಅಧ್ಯಯನದ ನಂತರವೇ ಯಾವುದೇ ನಿರ್ಧಾರ ಕೈಗೊಳ್ಳಬೇಕು ಎಂದು ಸಂಘ ಆಗ್ರಹಿಸಿದೆ.

ಈ ಹಿನ್ನೆಲೆಯಲ್ಲಿ 2026ರ ಜುಲೈ 9ರಂದು (ಗುರುವಾರ) ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಾಗೂ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ತುಮಕೂರು ಜಿಲ್ಲೆಯ ಸರಕಾರಿ,ಅನುದಾನಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು, ವಿದ್ಯಾರ್ಥಿಗಳು, ಪೋಷಕರು, ಶಿಕ್ಷಣ ತಜ್ಞರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲೆಯ ಎಲ್ಲಾ ತಾಲ್ಲೂಕು ಪದಾಧಿಕಾರಿಗಳು ಈ ದಿನ ಸಭೆ ಸೇರಿ ನಿರ್ಧರಿಸಲಾಯಿತು.

ಸಭೆಯಲ್ಲಿ ಪದವಿ ಪೂರ್ವ ಉಪನ್ಯಾಸಕರ ಸಂಘದ ಗೌರವಾಧ್ಯಕ್ಷ ಮಹಲಿಂಗೇಶ್, ಅಧ್ಯಕ್ಷರಾದ ಕುಮಾರ್.ಕೆ.ಜಿ,ಕಾರ್ಯಾಧ್ಯಕ್ಷರಾದ ತೇಜಸ್ವಿ ಕೆ.ಎಸ್, ಪ್ರಧಾನ ಕಾರ್ಯದರ್ಶಿ ನರಸಿಂಹರಾಜು ಡಿ. ಮತ್ತು ಉಪಾಧ್ಯಕ್ಷರಾದ ಶಹನಾಜ್ ಭಾನು, ಜಿಲ್ಲಾ ಪದಾಧಿಕಾರಿಗಳು, ತಾಲೂಕು ಪದಾಧಿಕಾರಿಗಳು ಭಾಗವಹಿಸಿದ್ದರು.

ಕೆಲಸದ ಒತ್ತಡ ಅಪಘಾತದಲ್ಲಿ ಎಸ್.ಐ.ಅರ್. ಸೂಪರವೈಜರ್ ಸಾವು; ಸಹಾಯ ಕೇಂದ್ರಗಳ ತೆರೆಯುವಿಕೆಗೆ ಸಿಪಿಐ(ಎಂ) ಆಗ್ರಹ

ತುಮಕೂರು: ಗೂಳೂರು ಗ್ರಾಮದ ವ್ಯಾಪ್ತಿಯಲ್ಲಿ ಸಂಭವಿಸಿದ ದ್ವಿಚಕ್ರವಾಹನ–ಲಾರಿ ಅಪಘಾತದ ಕೆಲಸದ ಒತ್ತಡ ಅಪಘಾತದಲ್ಲಿ ಎಸ್.ಐ. ಅರ್. ಸೂಪರವೈಜರ್ ಭಾವನ ಅವರು ಸಾವಿಗೆ ಇಡಾಗಿದ್ದಾರೆ , ಇದು ಕಳವಳಕಾರಿ ವಿಷಯ ಎಂದು ಸಿಪಿಐ(ಎಂ) ತುಮಕೂರು ಜಿಲ್ಲಾ ಸಮಿತಿ ಅಭಿಪ್ರಾಯ ಪಟ್ಟಿದೆ.. ಅತಿಯಾದ ಕೆಲಸದ ಒತ್ತಡ, ಪರಸ್ಪರ ವಿರೋಧಾತ್ಮಕ ಸೂಚನೆಗಳು ಮತ್ತು ಅಮಾನುಷ ಕಾರ್ಯವಿಧಾನಗಳಿಂದಾಗಿ ನೌಕರರು, ವಿಶೇಷವಾಗಿ ಕೆಳ ಹಂತದ ನೌಕರರು ಅಪಾರ ತೊಂದರೆಗಳನ್ನು ಎದುರಿಸುತ್ತಿದ್ದಾರೆಂದು ಸಿಪಿಐ (ಎಂ). ತೀವ್ರವಾಗಿ ಆರೋಪಿಸಿದೆ.

ಬಿಎಲ್‌ಓಗಳು, ಗ್ರಾಮ ಲೆಕ್ಕಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಸೇರಿದಂತೆ ಕ್ಷೇತ್ರ ಸಿಬ್ಬಂದಿಗಳು ದಿನವಿಡಿ ಕರ್ತವ್ಯದಲ್ಲಿರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವಿಶ್ರಾಂತಿಯಿಲ್ಲದ ಕೆಲಸ, ಅನಿಶ್ಚಿತ ಸಮಯ ಮತ್ತು ನಿರಂತರ ಟೀಕೆಗಳು ನೌಕರರ ಆರೋಗ್ಯವನ್ನು ಕುಂದಿಸುತ್ತಿವೆ. ಮತದಾರರ ಪಟ್ಟಿ ನವೀಕರಣ, ಹತ್ತು ಹಲವು ಜವಾಬ್ದಾರಿಗಳನ್ನು ಒಬ್ಬೊಬ್ಬ ಸಿಬ್ಬಂದಿಗೆ ವಹಿಸಲಾಗುತ್ತಿದೆ.

ಪ್ರಮುಖಸಮಸ್ಯೆಯೆಂದರೆ, ಎಣಿಕೆ(Enumeration) ನಮೂನೆಗಳ ಭರ್ತಿ ವಿಷಯದಲ್ಲಿ ಉನ್ನತ ಅಧಿಕಾರಿಗಳು ವಿರೋಧಾತ್ಮಕ ಸೂಚನೆಗಳನ್ನು ನೀಡಿದ್ದಾರೆ. ಮೊದಲಿಗೆ "ಎಣಿಕೆ ನಮೂನೆಗಳನ್ನು ಭರ್ತಿ ಮಾಡಬೇಡಿ" ಎಂದೂ, ಕೆಲವು ದಿನಗಳ ನಂತರ "ಎಲ್ಲಾ ಎಣಿಕೆ ನಮೂನೆಗಳನ್ನು ಕಡ್ಡಾಯವಾಗಿ ಭರ್ತಿ ಮಾಡಿ" ಎಂದೂ ಆದೇಶಿಸಲಾಗಿದೆ. ಈ ದ್ವಂದ್ವ ಸೂಚನೆಗಳಿಂದಾಗಿ ಬಿಎಲ್‌ಓ ಗಳು ಸಂಪೂರ್ಣ ಗೊಂದಲಕ್ಕೊಳಗಾದರು. ಈಗಾಗಲೇ ಭರ್ತಿ ಮಾಡದೆ ಬಿಟ್ಟಿದ್ದ ನಮೂನೆಗಳನ್ನು ಹಿಂತಿರುಗಿ ಭರ್ತಿ ಮಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಇದರಿಂದ ಸಿಬ್ಬಂದಿಗಳಿಗೆ ದುಪ್ಪಟ್ಟು ಕೆಲಸದ ಒತ್ತಡ, ಅತಿಯಾದ ಅವಧಿ ಮತ್ತು ಮಾನಸಿಕ ಒತ್ತಡ ಉಂಟಾಯಿತು. ವಿವಿಧ ಮೂಲಗಳಿಂದ (ವ್ಹಾಟ್ಸಾಪ್, ದೂರವಾಣಿ, ಪತ್ರ, ಇಮೇಲ್) ಪರಸ್ಪರ ವಿರುದ್ಧವಾದ ಸೂಚನೆಗಳು ಬರುತ್ತಿವೆ ಎಂದು ಹಲವು ಬಿ.ಎಲ್ ಓ ಗಳು ಅಳಲು ತೋಡಿಕೊಂಡಿದ್ದಾರೆ ಎಂದು ಸಿಪಿಐ (ಎಂ). ಅರೋಪಿಸಿದೆ.

ಅಪಘಾತದಲ್ಲಿ ಮೃತಪಟ್ಟ ನೌಕರನ ಕುಟುಂಬಕ್ಕೆ ಸೂಕ್ತ ಪರಿಹಾರ ಮತ್ತು ಸರಕಾರಿ ಉದ್ಯೋಗ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.



ಹೆಲ್ಪ್ ಡೆಸ್ಕ್ ಗೆ ಸಿಪಿಐ(ಎಂ) ಬೇಡಿಕೆ: ಪ್ರತಿಯೊಂದು ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜನಸ್ನೇಹಿ ಸಹಾಯ ಕೇಂದ್ರ (ಊಜಿಟಿ ಆಭಿಇ) ತೆರೆಯಬೇಕು. ಈ ಕೇಂದ್ರಗಳು ಸಾರ್ವಜನಿಕರಿಗೆ ಎಲ್ಲಾ ಎಸ್.ಐ. ಆರ್ ಮಾಹಿತಿ, ಅರ್ಜಿ ಭರ್ತಿಗೆ ಸಹಾಯ, ದಾಖಲೆಗಳ ಸಂಗ್ರಹಣೆ, ಅರ್ಜಿ ಸ್ಥಿತಿ ಟ್ರ್ಯಾಕಿಂಗ್ ಮತ್ತು ದೂರು ನೋಂದಣಿ ಸೌಲಭ್ಯಗಳನ್ನು ಒದಗಿಸಬೇಕು. ಕ್ಷೇತ್ರ ಸಿಬ್ಬಂದಿಗಳಿಗೆ ಕಂಪ್ಯೂಟರ್, ಪ್ರಿಂಟರ್, ಅಂತರ್ಜಾಲ, ತರಬೇತಿ ಮತ್ತು ಪ್ರಚಾರ ಸಾಮಗ್ರಿಗಳನ್ನು ಒದಗಿಸಬೇಕು. ಎರಡು ಸಿಬ್ಬಂದಿಗಳನ್ನು ನಿಯೋಜಿಸಿ – ಒಬ್ಬರು ಕಚೇರಿಯಲ್ಲಿ, ಇನ್ನೊಬ್ಬರು ಗ್ರಾಮಗಳಲ್ಲಿ ಸೇವೆ ನೀಡಬೇಕು. ಕೇಂದ್ರವು ಬೆಳಿಗ್ಗೆ 9.00 ರಿಂದ ಸಂಜೆ 6.00 ರವರೆಗೆ ಕಾರ್ಯನಿರ್ವಹಿಸಬೇಕು.

ದ್ವಂದ್ವ ಸೂಚನೆಗಳಿಗೆ ಕಡಿವಾಣ ಹಾಕಬೇಕು. ಎಸ್. ಐ. ಆರ್ ಅರ್ಜಿ ವಿತರಿಸಿದ ನಂತರ ಮತ್ತೆ ನಮೂನೆಗಳನ್ನು ಭರ್ತಿ ಮಾಡುವಂತೆ ಸೂಚಿಸಬಾರದು. ಎಲ್ಲಾ ಸೂಚನೆಗಳು ಲಿಖಿತ ರೂಪದಲ್ಲಿ ಮತ್ತು ಏಕೀಕೃತವಾಗಿರಬೇಕು. ಸೂಚನೆ ಬದಲಾಯಿಸಬೇಕಾದಲ್ಲಿ ಸ್ಪಷ್ಟ ಕಾರಣ ಮತ್ತು ಸಾಕಷ್ಟು ಸಮಯ ನೀಡಬೇಕು. ಪ್ರತಿ ನೌಕರರ ಕರ್ತವ್ಯದ ವ್ಯಾಪ್ತಿ, ಸಮಯ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ವಿವರಿಸಬೇಕು. ನೌಕರರ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವಾಗ ಅವರ ಆರೋಗ್ಯ ಮತ್ತು ಸಮಾಜಮುಖಿ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ದೂರುಗಳಿಗೆ ಸ್ವತಂತ್ರ ಸಮಿತಿ ರಚಿಸಬೇಕು.ಸಿಪಿಐ(ಎಂ) ತುಮಕೂರು ಜಿಲ್ಲಾ ಸಮಿತಿಯು ಸರಕಾರವು ನೌಕರರ ಒತ್ತಡವನ್ನು ಕಡಿಮೆಗೊಳಿಸುವ, ಪಾರದರ್ಶಕ, ಸಮಾಜಮುಖಿ ಮತ್ತು ಜನಸ್ನೇಹಿ ಆಡಳಿತ ವ್ಯವಸ್ಥೆಗೆ ಆದ್ಯತೆ ನೀಡಬೇಕೆಂದು ಒತ್ತಾಯಿಸಿದೆ.

ಶ್ರೀ ಸಿದ್ದಾರ್ಥ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸ್ಟಾರ್ಟ್‌ಅಪ್ ಪದರ್ಶನಕ್ಕೆ ವೇದಿಕೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರದ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದಲ್ಲಿ (ಖಖಋಖ)ಯಲ್ಲಿ ಐಇಇಇ (ಖಇಇಇ) ಪವರ್ ಎಲೆಕ್ಟ್ರಾನಿಕ್ಸ್ ಸೊಸೈಟಿ (ಕಇಐಖ) ದಿನಾಚರಣೆಯ ಅಂಗವಾಗಿ ಸ್ಟಾರ್ಟ್‌ಅಪ್ ಪಿಚ್ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಸ್ಪರ್ಧೆಯು ಯುವ ನವೋದ್ಯಮಿಗಳಿಗೆ ತಮ್ಮ ಉದ್ಯಮಶೀಲ ಆಲೋಚನೆಗಳನ್ನು ಪ್ರದರ್ಶಿಸಲು ಅತ್ಯುತ್ತಮ ವೇದಿಕೆಯನ್ನು ಕಲ್ಪಿಸಲಾಯಿತು. ವಿವಿಧ ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿ ಒಟ್ಟು 22 ನವೀನ ಸ್ಟಾರ್ಟ್‌ಅಪ್ ಪರಿಕಲ್ಪನೆಗಳನ್ನು ಮಂಡಿಸಿದರು.

ಕ್ಯಾಂಪಸ್‌ನ ಚಾಣುಕ್ಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಮತ್ ಟ್ರಾನ್ಸ್‌ಫಾರ್ಮರ್ಸ್ ಪ್ರೈವೇಟ್ ಲಿಮಿಟೆಡ್‌ನ



ವ್ಯವಸ್ಥಾಪಕ ನಿರ್ದೇಶಕ ಕೆ. ವಿಶ್ವನಾಥ್ ಕಾಮತ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಉದ್ಯಮಶೀಲತೆ, ನವೀನತೆ ಹಾಗೂ ಉದ್ಯಮ ಸ್ಥಾಪನೆಯತ್ತ ಒಲವು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಕೇವಲ ಉದ್ಯೋಗ ಅರಸುವವರಾಗದೆ, ಉದ್ಯೋಗ ನೀಡುವವರಾಗಬೇಕು. ಯಶಸ್ವಿ ಉದ್ಯಮವನ್ನು ಹೇಗೆ ಆರಂಭಿಸಬೇಕು ಮತ್ತು ನಿರ್ವಹಿಸಬೇಕು ಎಂಬುದರ ಕುರಿತು ಪ್ರೇರಣಾದಾಯಕ ವಿಚಾರಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ವಿಶ್ವನಾಥ ಕಾಮತ್ *"ಖಖಋಖ ಖಇಇಇ ಕಇಐಖ ಅತ್ಯುತ್ತಮ ನಿರ್ಗಮಿತ ವಿದ್ಯಾರ್ಥಿಗೆ 1,00,000 ರೂಪಾಯಿ ಸ್ಥಿರ ಠೇವಣಿ ಪ್ರಶಸ್ತಿ ಯನ್ನು ಘೋಷಿಸಿದರಲ್ಲದೆ, ವಿದ್ಯಾರ್ಥಿ ಸದಸ್ಯರ ಸಾಧನೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶವನ್ನು ವ್ಯಕ್ತಪಡಿಸಿದರು.

ಉಪಕುಲಪತಿ ಡಾ. ಕೆ. ಬಿ. ಲಿಂಗೆಗೌಡ ಅವರು ಮಾತನಾಡಿ, ವಿದ್ಯಾರ್ಥಿಗಳು ಕ್ರಿಯಾತ್ಮ ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಉದ್ಯಮ ಆರಂಭಿಸುವ ನಾವೀನ್ಯತೆಗಳನ್ನು ಕಲಿಯಬೇಕೆಂದರು.

ಕುಲಸಚಿವ ಡಾ. ಅಶೋಕ್ ಮೆಹ್ತಾ, ಪರೀಕ್ಷಾ ನಿಯಂತ್ರಕ ಡಾ. ಸುನೀಲ್, ಪ್ರಾಂಶುಪಾಲ ಡಾ. ಮಹಾಂತೇಶ್ ಎಂ. ನಾಡಕಟ್ಟಿ, ಡೀನ್ ಡಾ. ರೇಣುಕಲತಾ ಎಸ್, ವಿಭಾಗದ ಮುಖ್ಯಸ್ಥ ಡಾ. ಪ್ರದೀಪ್ ಎನ್., ಐಇಇಇ ಪವರ್ ಎಲೆಕ್ಟ್ರಾನಿಕ್ಸ್ ಸೊಸೈಟಿ ವಿದ್ಯಾರ್ಥಿ ಶಾಖೆಯ ಸಲಹೆಗಾರ ಹಾಗೂ ಪ್ರಾಧ್ಯಾಪಕರಾದ ಡಾ. ಯೋಗಾನಂದ ಬಿ. ಎಸ್. ಸಂಯೋಜಕರಾದ ವೇಣುಗೋಪಾಲ್, ಲಿಖಿತಾ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ನವೀನ ಚಿಂತನೆ, ಉದ್ಯಮಶೀಲತೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿತು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.